ಶ್ರೀ ಎಸ್. ಆರ್. ಬೊಮ್ಮಾಯಿ.—In a way ಒಂದು ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಒಬ್ಬ ಲೇಖಕನ ಅಭಿಪ್ರಾಯವನ್ನು ನಾವು ಗ್ರಹಿಸಬಹುದು. ಇಲ್ಲಾ ಕೆಲವರು ಗ್ರಹಿಸದೇ ಇರಬಹುದು. ಇದು ಮ್ಯಾಂಡೇಟರಿ ಏನಲ್ಲ, ಯಾವುದೇ ಒಬ್ಬ ಸದಸ್ಯರ ಮೇಲೆ ಒಂದು ದೂರು ಬಂದರೆ, ಅಂತಹ ಸದಸ್ಯರು ಇರಬೇಕು, ಇದರೆ ಒಳ್ಳೆಯದು. ಇದು ನನ್ನ ಅಭಿಪ್ರಾಯ.

ಆದರೆ ಕಾನೂನಿನಲ್ಲಿ ಇರಲೇಬೇಕು ಎಂದು ಇಲ್ಲ. ರೂಲ್ಸಿನಲ್ಲೂ ಆ ರೀತಿ ಇಲ್ಲ. ಅದು ಬೈಂಡಿಂಗ್ ಅಲ್ಲ, ಅದು ಗಾಸ್ಪೆಲ್ ಟ್ರುತ್ ಅಲ್ಲ, ತಾವು ಚರ್ಚೆಯನ್ನು ಮುಂದುವರಿಸಿ.

SRI M. VEERPPA MOILY.—Even as a matter of principle of natural jnstice–forget about the conventions or what is written by the authors in this book–it has to be done in his presence. ಈಗ ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಬಹಳ ಅನುಭವಿಗಳು. ಸದನದ ಸತ್ ಸಂಪ್ರದಾಯಗಳನ್ನು ಎತ್ತಿ ಹಿಡಿಯಬೇಕಾದ ಸಭಾನಾಯಕರು, ಇವತ್ತು ಒಬ್ಬ ಮಾನ್ಯ ಸದಸ್ಯರಿಗೆ ಒಂದು ರೀತಿಯಲ್ಲಿ ರಕ್ಷಣೆ ಕೊಡುವ ಹಾಗೆ ಮಾತನಾಡಿ, ಈ ಬುಕ್ಕನ್ನು ಒಗೆಯಿರಿ, ಈ ಬುಕ್ಕನ್ನು ಸುಡಿ, ಆದರೆ ಅವರಿಗೆ ಯಾವುದೇ ರೀತಿಯಲ್ಲಾದರೂ ರಕ್ಷಣೆಯನ್ನು ಕೊಟ್ಟೇಬಿಡೋಣ ಎನ್ನುವಂತಹ ರೀತಿಯಲ್ಲಿ ಘೋಷಣೆ ಮಾಡತಕ್ಕಂತಹದ್ದು ಈ ಸದನದಲ್ಲಿ ಏನಿದೆ ಅದು ಸರಿಯಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಆ ಬುಕ್ಕನ್ನು ಸುಡಿರಿ ಎಂದು ಯಾರು ಹೇಳಿದರು ?

ಶ್ರೀ ಎಂ. ವೀರಪ್ಪ ಮೊಯಿಲಿ,—ಮತ್ತಿನ್ನೇನು ?

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿ ಹೇಳಲಿಲ್ಲ ಸನ್ಮಾನ್ಯ ಮುಖ್ಯಮಂತ್ರಿಗಳು.

SRI M. VEERAPPA MOILY.—He said it is not a gospel truth.

ಶ್ರೀ. ಎ. ಲಕ್ಷ್ಮೀಸಾಗರ್ —ಒಗೆಯಿರಿ ಅಂತ ಹೇಳಿದರು ಅಂತ ಹೇಳತಕ್ಕ ಭಾಷೆಯನ್ನು ಅವರು ಹೇಳಿದರು ಅಂತ ಹೇಳುವುದು ಬೇಡ. ನಿಮ್ಮ ಭಾಷೆಯನ್ನು ಅವರ ಬಾಯಿಯಲ್ಲಿ ಆಡಿಸುವುದು ಬೇಡ. ಸನ್ಮಾನ್ಯ ಮುಖ್ಯಮಂತ್ರಿಗಳು ಕಾಮೆಂಟರಿಯೊಳಗೆ ಆ ರೀತಿ ಇದೆ, ಶೀರ್ಷಿನಲ್ಲಿ ಅಲ್ಲ. ಪೇಜ್ ೨೪೩ರ ಸೆಕೆಂಡ್ ಪ್ಯಾರಾಗ್ರಾಫ್‌ನಲ್ಲಿ ನೋಡಬಹುದು. ಆದರೆ ನೀವು ಅದನ್ನು ಪೂರ್ತಿ ನೋಡಿ. ಲೋಕ ಸಭೆಯ ಡಿಬೇಟ್ಸ್‌ನ್ನು ನೋಡಿ. ಇಂತಹ ತೀರ್ಮಾನವಾಗಿದ್ದರೆ ಅದನ್ನು ನಮ್ಮ ರೆಫರೆನ್ಸ್‌ಗೆ ಕೊಡಿ ಅಂತ ಮುಖ್ಯಮಂತ್ರಿಗಳು ಹೇಳಿದ್ದುದು. ಆದರೆ ಮುಖ್ಯಮಂತ್ರಿಗಳು ಆ ರೀತಿ ಬುಕ್ಕನ್ನು ಒಗೆಯಿರಿ ಎಂದು ಹೇಳಲಿಲ್ಲ. ಅವರು ಇರತಕ್ಕ ಕನ್ವೆಂಷನ್ ಅನ್ನು ಮುರಿಯಬಾರದು ಎಂದು ಹೇಳಲಿಲ್ಲ.

SRI K. H. SRINIVAS.—When it suits you.

SRI A. LAKSHMISAGAR.—When the circumstances warrant decisions are rendered. When decisions are invalidated, courts do it. Everyone does it. We are living in a changed society. Once a decision having been rendered it does not remain there for all times to come entirely. ಇದು ಕಾಮೆಂಟರಿ, ಡಿಸಿಷನ್ ಮೇಲೆ ಆ ಒಂದು ಅಬ್ಸರ್ವೇಷನ್ ಇಲ್ಲ ಎಂದು ಹೇಳಿದ್ದಾರೆ, ಮಿಕ್ಕಿದನ್ನು ಯಾವುದನ್ನು ಹೇಳಲಿಲ್ಲ. ಹಾಗಾದರೆ ಹಳೆಯ ಕನ್ವೆಂಷನ್ಸ್‌ಗಳು ಯಾವುದು ಇದ್ದವು ಅವುಗಳನ್ನು ತೆಗೆದಿಲ್ಲವೋ ? ಲೋಕ ಸಭೆಯಲ್ಲಾಗಲಿ, ಹೈಕೋರ್ಟಿನಲ್ಲಾಗಲಿ. ಸುಪ್ರಿಂ ಕೋರ್ಟಿನಲ್ಲಾಗಲಿ, ಇದ್ದಂತಹ ಕಾನೂನುಗಳನ್ನು ಬದಲಾವಣೆ ಮಾಡಿಲ್ಲವೋ ? ಹಾಗೆ ಮಾಡಿದ್ದರೆ ಅವುಗಳೆಲ್ಲವನ್ನೂ ಅನುಕೂಲ ಸಿಂಧು ಅಂತ ಕರೆಯೋಣವೇನು ? ಹೊಸ ಸಂಪ್ರದಾಯ ಗಳನ್ನು ನಾವು ಸಮಾಜದಲ್ಲಿ ಬೆಳೆಸಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಹೇಳಿದ್ದು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಇವರಿಗೆ ಬೇಕಾದಾಗ ಮಾತ್ರ ಉಪಯೋಗಿಸಿ ಬೇಡದೆ ಇದ್ದಾಗ......

ಪ್ರೊ ಎ. ಲಕ್ಷ್ಮೀಸಾಗರ್ —ಕನ್ವೆಂಷನ್ ಯಾವಾಗ ? ನಾವು ಸಮಾಜದಲ್ಲಿ ತೀರ್ಮಾನ ಮಾಡಿ ಕೊಂಡಿರುವುದು, ಅದನ್ನು ಕನ್ವೆನ್‌ಷನ್ ಎಂದು ಹೇಳುತ್ತೇವೆ ಹೌದೋ ಅಲ್ಲವೋ ? ಸರ್ವ ಕಾಲದಲ್ಲಿ ಎಲ್ಲ ಕೂಡಾ ಬದಲಾವಣೆ ಆಗಿದೆ. ಆ ಅರ್ಥದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೇ ಹೊರತು ಹೊಸದೇನನ್ನೂ ಹೇಳಿಲ್ಲ.

(ಗೊಂದಲ)

† ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಮ್ಮ ನಿಯಮಾವಳಿಗಳು ಇವೆ. ಕಾನೂನುಗಳಿಗೆ ಹೇಗೆ ಕೋರ್ಟ್‌ನಲ್ಲಿ, ಸುಪ್ರೀಂ ಕೋರ್ಟ್ ಮುಂತಾದ ವರಿಷ್ಠ ನ್ಯಾಯಾಲಯಗಳ ತೀರ್ಪಿನಿಂದಾಗಿ ನಿರ್ದಿಷ್ಟವಾದ, ಖಚಿತವಾದ, ಅರ್ಥ ಪ್ರಾಪ್ತಿಯಾಗುತ್ತದೋ ಆ ರೀತಿಯಲ್ಲಿ ಈ ಮನೆಯ ಸಭೆಯ ನಡವಳಿಕೆಗಳಿಗೂ ಕೂಡಾ ಒಂದು ಔಚಿತ್ಯ ಬರಬೇಕಾದರೆ, ಒಂದು ಅರ್ಥ ಬರಬೇಕಾದರೆ ಸಾಧಾರಣವಾಗಿ ನಾವು ಇದರಲ್ಲಿ ಹಲವಾರು ವರ್ಷಗಳಿಂದ ಕೆಲವೊಂದು ಗ್ರಂಥಗಳನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಇತ್ತೀಚಿನ ವರ್ಷಗಳಲ್ಲಿ ಕೌಲ್ ಅಂಡ್ ಶೆಕ್ದರ್‌ನ್ನೇ ಹೆಚ್ಚಾಗಿ ಇದರ ಮೇಲೆ ಯಾವುದಾದರು ಒಂದು ಅನುಮಾನ ಬಂದಾಗ ನಾವು ಹೇಗೆ ನಡೆಕೊಳ್ಳಬೇಕು, ಇಂತಹ ಸಂದರ್ಭದಲ್ಲಿ ನಡವಳಿಕೆ ಯಾವ ರೀತಿ ಇರಬೇಕೆನ್ನುವುದಕ್ಕೋಸ್ಕರವಾಗಿ ಅದನ್ನು ಬಳಸುತ್ತಿದ್ದೇವೆ. ಬಹುಶಃ ನಮಗಿಂತಲೂ ಬಹಳ ಸಾರಿ ಮಾನ್ಯ ಲಕ್ಷ್ಮೀಸಾಗರ್‌ರವರೇ ಬಳಸಿದ್ದಾರೆ. ಆದರೆ ಇವತ್ತು ಏನು ಹೇಳುತ್ತಾರೆಂದರೆ ಇದು ಅವರ ಅಭಿಪ್ರಾಯ ಅಭಿಪ್ರಾಯ ಸರಿಯಲ್ಲ ಎಂದು ಹೇಳುವುದಕ್ಕೆ ಇನ್ನು ಯಾವುದಾದರೂ ಒಂದು ಅಭಿಪ್ರಾಯ ತಮ್ಮ ಹತ್ತಿರ ಇದೆಯೇ ? ಕೌಲ್ ಅಂಡ್ ಶೆಕ್ದರ್ ಅಲ್ಲಪ್ಪ May's Parliamentary Procedure ನಲ್ಲಿ ಆ ರೀತಿ ಇದೆ ಎಂದು ಹೇಳಿದರೆ we are prepared to heae it.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲೂ ಇಲ್ಲ ಎಂದರೆ ಹೇಗೆ ?

ಶ್ರೀ ಕೆ. ಎಚ್ ಶ್ರೀನಿವಾಸ್.—ಎಲ್ಲೂ ಇಲ್ಲ ಎಂದರೆ ನೀವೇ ಪಂಡಿತರು ಎಂದು ಒಪ್ಪಿಕೊಳ್ಳೋಣ. ನಿಮಗಿಂತಲೂ ಪಾಂಡಿತ್ಯ ಇರುವವರು ಬರೆದು ಇಟ್ಟಿರಬೇಕಾದರೆ ನಿಮ್ಮ ಪಾಂಡಿತ್ಯವನ್ನು ಅದರ ಮೇಲೆ ಪ್ರಯೋಗ ಮಾಡುವುದು ಬೇಡ. ಎಲ್ಲೂ ಇಲ್ಲದಿದ್ದರೆ ನಿಮ್ಮದನ್ನು ಒಪ್ಪಿಕೊಳ್ಳೋಣ. ಪ್ರಯೋಗ ಮಾಡುವುದು ಬೇಡ. ಪ್ರಶ್ನೆ ಏನೆಂದರೆ, ಕೌಲ್ ಅಂಡ್ ಶೆಕ್ದರ್‌ನಲ್ಲಿ ಏನು ಅಭಿಪ್ರಾಯವಿದೆ ಎಂದು ಸ್ಪಷ್ಟವಾಗಿ ಮಾನ್ಯ ಮೊಯಿಲಿಯವರು ಹೇಳಿದ್ದಾರೆ The ball is in your court. Suppose you were to show to this House that there is also another point of view. ಈಗ ಕೆಲವು ಹೈಕೋರ್ಟ್ ತೀರ್ಪುಗಳನ್ನು ಹೈಕೋರ್ಟಿನಲ್ಲಿ ಅಥವಾ ಇನ್ನೊಂದು ಕೋರ್ಟಿನಲ್ಲಿ ಕೋಟ್ ಮಾಡಿದ್ದಕ್ಕೆ ಏನು ಹೇಳುತ್ತಾರೆ ಅಂದರೆ The circumstances of this is different ಅದಕ್ಕೋಸ್ಕರ ಡಿಸ್ಟಿಂಗ್ವಿಷ್ ಮಾಡುತ್ತಾರೆ. ಆದರೆ the ratio decidendi of particular deicision in a case is not applicable to the circumstances of this case ಎಂದು ತೋರಿಸುತ್ತಾರೆ. ಆ ರೀತಿಯಲ್ಲಿ ನೀವು ತೋರಿಸುವುದಿದ್ದರೆ ನಾವು ಇನ್ನೂ ಒಂದು ಗಂಟೆ ಕಾಲ ಕೇಳುತ್ತೇವೆ. ಆದರೆ ಇವತ್ತು ಮಾನ್ಯ ರಾಮಕೃಷ್ಣ ಹೆಗ್ಡೆಯವರನ್ನು ಇಲ್ಲಿಗೆ ಕರೆಯಿಸುವುದಕ್ಕೆ ಶಕ್ತಿ ಇಲ್ಲ ಎನ್ನುವ ಒಂದೇ ಕಾರಣಕ್ಕೋಸ್ಕರ ಬಹಳ ದೊಡ್ಡ ಒಂದು ಹೊಸ ಸಂಪ್ರದಾಯವನ್ನು ನಿರ್ಮಾಣ ಮಾಡುತ್ತೇವೆ ಎಂದರೆ you must be ashamed of claiming to give a new srot of procedure here. ಏತಕ್ಕೋಸ್ಕರ ? ನಿಮಗೆ ಅನುಕೂಲ ಸಿಂಧು ಅದಾಗ ಹೊಸ ಕನ್ವೆನ್ಷನ್. ಯಾವ ದೊಡ್ಡ ಉದ್ದೇಶಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರಿ ? ನಿಮ್ಮ ಕೈಲಿ ಆಗದಿದ್ದರೆ you can plead your helplessnss that you are not in a position to summon the member. ಅವರಿಗೆ ರಕ್ಷಣೆ ಕೊಡುವುದಕ್ಕೆ ಹೊಸ ಸಂಪ್ರದಾಯ ಅಗತ್ಯ ಇಲ್ಲ. ಸಂಪ್ರದಾಯ ಇದೆ. ನೀವು ಪಾಲಿಸುವುದಕ್ಕೆ ತಯಾರು ಇದ್ದೀರೋ ಇಲ್ಲವೋ ಹೇಳಿ ಸ್ವಾಮಿ.

ಶ್ರೀ ಆರ್. ವೆಂಕಟರಾಮಯ್ಯ.—ಬಿಫೋರ್ ರೈಸಿಂಗ್ ಎಂದು ಇದೆ. ಆಗಲೇ ಅವರು ಬರಬೇಕೆಂದು ಇದೆ. ಕಾಲ್ ಅಂಡ್ ಶೆಕ್ದರ್‌ನಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಇದೆ. ಅದನ್ನು ನಾನು ಓದುತ್ತೇನೆ.

I am quoting from page 242 of Kaul & Shakdher Complaints against Members :

"When a compliants of alleged breach of privilege or contempt of the House is made by a member the proceedings in the House dealing with that complaint differ

somewhat according as the person implicated is a member or a stranger. The main point of difference in the two cases is that before making a complaint against a member a notice is given to him beforehand as a matter of courtesy. Further, when a member seeks to raise question of privilege against another member, the Speaker, as already stated, befor giving his consent to the raising of the matter in the House, gives an opportunity to the member complained against, to place before the Speaker of the House such facts as he may eave on the question."

Therefore, before rising he has to be present here. ಕ್ಲಿಯರ್ ಆಗಿ ಇದೆ. ಮಾನ್ಯ ಹೆಗಡೆಯವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಪಕ್ಷದ ಸದಸ್ಯರನ್ನು ಈ ಮನೆಗೆ ಕರೆಸುವುದಕ್ಕೆ ಶಕ್ತಿಯಿಲ್ಲ ಎನ್ನುವುದು ಸರಿಯಲ್ಲ. ಅವರನ್ನು ಕರೆಸುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಬಾಯಲ್ಲಿ ಹೇಳುತ್ತೀರಿ, ಒಂದು ಸಾರಿ ಕರೆಸಿ.

SRI S. R. BOMMAI.—I have already submitted that this is only a commentary, not a decision of any House of any Parliament.

SRI K. H. SRINIVAS.—It is most unfair to make such a comment on Kaul & Shakdher.

SRI S. R. BOMMAI.—He is ought to have behaved responsibly. I have every right......

(Interruption)

SRI S. R. BOMMAI.—I would like to know, is he the only authority in the world ?

SRI M. VEERAPPA MOILY.—He is the only authority. Kaul and Shakdher is the only authority as far as parliamentary procedure is concerned. Kindly cite any other authority. Is there any other authority ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಉಪಾಧ್ಯಕ್ಷರೇ, ಕನ್‌ವೆನ್‌ಷನ್ ಬಗ್ಗೆ ಮಾತನಾಡಿದ್ದಾರೆ.

SRI S. R. BOMMAI.—I am on may legs. ನಾನು ಇನ್ನೂ ಮಾತನಾಡಿಲ್ಲ, ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಹೊಸ ಕನ್‌ವೆನ್‌ಷನ್ ಮಾಡುವುದಕ್ಕೆ ಆಗುವುದಿಲ್ಲ. ಒಳ್ಳೆಯ ಕನ್‌ವೆನ್‌ಷನ್ ಒಂದು, ಕೆಟ್ಟ ಕನ್‌ವೆನ್‌ಷನ್ ಹಿಡಿದುಕೊಂಡು ಏತಕ್ಕೆ ಹೊರಟಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೌಲ್‌ರವರ ಅಭಿಪ್ರಾಯಗಳನ್ನು ಅನೇಕ ಸಲ ಸಭಾಪತಿಗಳ ಒಪ್ಪಿಲ್ಲ. ಅನೇಕ ವಿಚಾರಗಳಲ್ಲಿ ಒಪ್ಪಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಈ ಸದನದಲ್ಲಿ ಒಪ್ಪಿಲ್ಲವೆಂದು ಹೇಳುತ್ತಾರೆ, ಲೋಕ ಸಭೆಯಲ್ಲಿ ಒಪ್ಪಿಲ್ಲವೆಂದರೆ ಏತಕ್ಕೆ ಒಪ್ಪಿಲ್ಲ ಎಂಬುದನ್ನು ದಯವಿಟ್ಟು ಹೇಳಿ. Please don't say that.

ಉಪಾಧ್ಯಕ್ಷರು.—ಅವರು ಹೇಳಲಿಕ್ಕೆ ಅಲೋ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರತಿ ಸಾರಿ ಕೊಶ್ಚನ್ ಕೇಳಿದರೆ ಹೇಳುವುದಕ್ಕಾಗುವುದಿಲ್ಲ. ಈ ರೀತಿ If you go on cross-examine at every time, I am not in a position to proceed with my thoughts.

ಶ್ರೀ ಎಂ. ರಾಮಪ್ಪ.— ಈ ಒಂದು ವಿಚಾರದಲ್ಲಿ ನಿಮ್ಮನ್ನು ನೋಡಿದರೆ ನಮಗೆ ಪಾಪ ಅನಿಸುತ್ತದೆ. ಯಾರೋ ಮಾಡಿದ ಮಗುವನ್ನು ಏತಕ್ಕೆ ಎತ್ತಿಕೊಂಡು ತಿರುಗಾಡುತ್ತೀರಿ ?

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ತಾವು ಕೂಡಿ. ಇದೇನಿದು ಸಭೆಯೋ ಅಥವಾ ಸಂತೆಯೋ ? ನಿಮಗೆ ನೀತಿ ನಿಯಮಗಳು ಇಲ್ಲವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರ ಪಾಪ, ಯಾರ ಕೂಸು ಎನ್ನುವುದನ್ನು ಜನ ಹೇಳುತ್ತಾರೆ. ಅದನ್ನು ಜನ ಡಿಸೈಡ್ ಮಾಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಾವು ಇದರ ಬಗ್ಗೆ ಮಾತನಾಡಿ. ಶ್ರೀ ಎಸ್. ಆರ್. ಬೊಮ್ಮಾಯಿ, ಕೌಲ್‌ರವರ ಅಭಿಪ್ರಾಯಗಳು ಬಂದು ಎಷ್ಟೋ ವರ್ಷಗಳಾಗಿವೆ. ಈ ಅಭಿಪ್ರಾಯಗಳಿಗೆ ಕೊನೆ ಇದ್ದಿದ್ದರೆ, ನಿಮ್ಮ ರೂಲ್ಸ್‌ನಲ್ಲಿ ಏತಕ್ಕೆ ಅಳವಡಿಸಿಕೊಳ್ಳಲಿಲ್ಲ ? ಇಂಥ ದೂರುಗಳು ಬಂದಾಗ ಸದಸ್ಯರು ಸಭೆಯಲ್ಲಿ ಇರಲೇಬೇಕು ಎಂದು ರೂಲ್ಸ್‌ನಲ್ಲಿ ಇರಬೇಕಾಗಿತ್ತು. ಲೋಕ ಸಭೆಯ ರೂಲ್ಸ್‌ಗಳಿವೆ, ನಮ್ಮ ರೂಲ್ಸ್‌ಗಳಿವೆ ಕೌಲ್‌ರವರು ಪುಸ್ತಕ ಬರೆದು ೧೦-೧೫ ವರ್ಷಗಳಾಗಿವೆ. ಈ ಮನೆಯಲ್ಲಿ ಅದನ್ನು ಒಪ್ಪಿಕೊಂಡಿದ್ದೇವೆ.

If it was a finality or a final word on this, then it should have found a place in the rules ಇವತ್ತು ಆ ರೀತಿ ಇದ್ದರೆ ರೂಲ್ಸ್‌ನಲ್ಲಿ ಇರಬೇಕಾಗಿತ್ತು. ಶ್ರೀ ವೆಂಕಟರಾಮಯ್ಯನವರು ಕಾಮೆಂಟರಿ ಓದಿದರು...

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ಅಭಿಪ್ರಾಯದಲ್ಲಿ ೧೯೦ರ ಕೆಳಗೆ ಮೋಷನ್ ಮಾಡುವಾಗ...

(ಗೊಂದಲ)

ಶ್ರೀ ಎಂ. ರಾಮಪ್ಪ.—ಮಾನ್ಯ ಉಪಾಧ್ಯಕ್ಷರೇ,..

ಉಪಾಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಈ ಸಭೆಯ ನಿಯಮಾವಳಿಗಳು ಏನಾದರೂ ಇದೆಯೇ ಪ್ರತಿಯೊಂದಕ್ಕೂ ಇಂಟರ್‌ವೆನ್‌ಷನ್ ಮಾಡಿದರೆ ಹೇಗೆ ಹೇಳುವುದಕ್ಕೆ ಆಗುತ್ತದೆ?

ಶ್ರೀ ಬಿ. ಎ. ಉಮರಬ್ಬ.—ಮಧ್ಯಾಹ್ನದ ಹೊತ್ತು ಹಸಿವಾಗಿದ್ದರೆ ಸ್ವಲ್ಪ ಸಮಾಧಾನದಿಂದ ಇರೋಣ.

(ಗೊಂದಲ)

ಉಪಾಧ್ಯಕ್ಷರು.—ಸಭೆಯಲ್ಲಿ ಯಾವರೀತಿ ಮಾತನಾಡಬೇಕು ಎಂದು ಗೊತ್ತಿರಬೇಕು.

ಶ್ರೀ ಬಿ. ಬಸವಲಿಂಗಪ್ಪ.-ತಾವು ಈ ಮನೆಯ ಉಪಾಧ್ಯಕ್ಷರಾಗಿದ್ದೀರಿ ಅವರು ಸದಸ್ಯರಾಗಿದ್ದಾರೆ ಅವರಿಗೆ ಮುಂಚೆ ಗೌರವ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗೆಯೇ ಸಭಾಧ್ಯಕ್ಷರಿಗೂ ಗೌರವ ಕೊಡಬೇಕು.

ಉಪಾಧ್ಯಕ್ಷರು.— ಸಭೆಯ ನಿಯಮಾವಳಿ ಪ್ರಕಾರ ಹೇಳಬೇಕು. ಪ್ರತಿಯೊಂದಕ್ಕೂ ಎದ್ದು ನಿಂತು ರನ್ನಿಂಗ್ ಕಾಮೆಂಟರಿ ಮಾಡಿದರೆ ಹೇಗೆ ಆಗುತ್ತದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುತ್ತಾ ಇದ್ದೆ. ಆದರೆ, ಪ್ರಿಲಿಮಿನರಿ ಸಬ್‌ಮಿಷನ್ ಮಾಡುವಾಗ ಸದಸ್ಯರು ಇರಲೇಬೇಕೆಂದು ಇಲ್ಲ. ಆದರೆ ೧೯೦ರ ಕೆಳಗೆ ಕನ್ಸೆಂಟ್ ಕೊಟ್ಟ ಮೇಲೆ ಅವರ ಎಕ್ಸಪ್ಲನೇಷನ್ ಕೇಳಬೇಕಾಗುತ್ತದೆ, before it is reffred to the privileges

committee. ತಾವು ತಮ್ಮ ಅಭಿಪ್ರಾಯಕ್ಕೆ ಬಂದು ಸದಸ್ಯರ ಒಂದು ಮನವಿಯನ್ನು ಒಪ್ಪಿಕೊಂಡು if the Chair is to give consent then only his explanation is called for ಅವರು ಗೈರುಹಾಜರಿಯಾಗಿ ಎಕ್ಸ್‌ಪ್ಲನೇಷನ್ ಕೊಡದೇ ಹೋದರೆ "no explanation" ಎಂದು ತಿಳಿದುಕೊಳ್ಳಬೇಕು. ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ ಮತ್ತು ರೂಲ್ಸ್ ಕ್ಲಿಯರ್ ಆಗಿದೆ.

(ಮಾನ್ಯ ಸಭಾಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

SRI. S. R. BOMMAI.—This is only a commentary. There is no decision of any House Therefore, it is not binding. It is only a guiding principle. Therefore, in my humble opinion, the presence of the member is absolutely not compulsory when mention is made at this stage. Only if you come to the conclusion that consent may be given, then an explanation will have to be asked from the member before it is referred to the privileges Committee and if the member doesn't give, it could be presumed that he has no explanation. But at this stage, the presence of the hon member is not necessary. Therefore, all those remarks whether you have got the capacity to call the member or whether the Leader of the House has got control over the member are all irrelavant and only politically motivated. At the most I would say it is an irresponsible statement.

† ಶ್ರೀ ಬಿ. ಬಸವಲಿಂಗಪ್ಪ,—ಮಾನ್ಯ ಅಧ್ಯಕ್ಷರೇ, ಶ್ರೀ ರಾಮಕೃಷ್ಣ ಹೆಗಡೆಯವರು ಈ ಸದನದ ಸದಸ್ಯರು. ನಾವು ಈ ಸದನದ ಸದಸ್ಯರನ್ನು ಬಿಟ್ಟು ಬೇರೆಯವರ ಮೇಲೆ ಏನೂ ದೂರನ್ನು ಎತ್ತಲಿಲ್ಲ. ಈಗ ಅವರು ಸದಸ್ಯರಾಗಿರುವಾಗ, ಈ ಸದನ ನಡೆಯುತ್ತಿರುವಾಗ ಹೊರಗೆ ಹೋಗಿ ಬಿಟ್ಟು ನಿನ್ನೆ ದಿವಸ ಪ್ರೆಸ್‌ಕಾನ್‌ಫರೆನ್ಸ್ ಮಾಡಿದ್ದಾರೆ. ಮಾಡಿ, ಈ ಸದನಕ್ಕೆ ಎಷ್ಟು ಅಗೌರವವನ್ನು ಮಾಡಬೇಕೋ ಅಷ್ಟು ಅಗೌರವ ರೂಪದಲ್ಲಿ ಅವರ ಭಾಷಣವನ್ನು ಮಾಡಿದ್ದಾರೆ. ಇದನ್ನು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದಾರೆ. ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಆದರೆ ಈ ಸದನಕ್ಕಿಂತ ಅವರು ದೊಡ್ಡವರೋ ಎನ್ನುವ ಪ್ರಶ್ನೆ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಕೌಲ್ ಅಂಡ್ ಶಕ್ಧರ್ ಬಗ್ಗೆ ಹೇಳುತ್ತಾ, ಅದು ನಮಗೆ ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ. ನಮ್ಮ ರೂಲ್ಸ್‌ನಲ್ಲಿ ಇಲ್ಲವೆಂದು ಅವರು ಹೇಳುತ್ತಾರೆ ರೂಲ್ಸ್‌ನಲ್ಲಿ ಇಲ್ಲದೇ ಹೋದರೆ ಏನು ವಿಧಾನಸಭೆ ಇದೆ, ಪಾರ್ಲಿಮೆಂಟ್ ಇದೆ ಅಲ್ಲಿ ಏನು ನಡವಳಿಕೆಗಳು ಇವೆ. ಆ ನಡವಳಿಕೆಗಳೆಲ್ಲವನ್ನೂ ಕೂಡ ನಾವು ನಡೆಸಿಕೊಂಡು ಬಂದಿದ್ದೇವೆ. ಕೌಲ್ ಮತ್ತು ಶಕ್ಧರ್ ಅವರು ಏನು ಪುಸ್ತಕವನ್ನು ಬರೆದಿದ್ದಾರೆ ಅದನ್ನು ಬಹಳ ರೂಪದಲ್ಲಿ ನಾವು ಅನುಸರಿಸಿದ್ದೇವೆ. ಹೀಗಿರುವಾಗ ನಮ್ಮ ರೂಲ್‌ನಲ್ಲಿ ಇಲ್ಲವೆಂದ ಮಾತ್ರಕ್ಕೆ ಇದು ಅನ್ವಯಿಸಬಾರದು ಎನ್ನುವ ಪ್ರಶ್ನೆ ಬರುವುದಿಲ್ಲ. ಪ್ರಿವಿಲೇಜ್ ಮೋಷನ್ ಕೆಳಗೆ. It is a matter of allegation It is a matter of complaint. It is a criminal complaint against the member of the House or a member outside the House. When we make this allegation against the person he must be present. Otherwise, in his absence we cannot try him. We may make so many allegations against him. He may be innocent or he may not be innocent, but he is expected to be present in this House and answer our charges. Otherwise, what happens we cannot just treat this matter as matter of court and treat him ex-parte. I don't think even in criminal cases a person involved in these things can

be treated and given ex-parte decision. Suppose we take a decision that he is guilty...

Sri S. R. Bommai.--It is going on record. Nobody is an accused here.

Sri B. Basavalingappa.--Have we not sent anybody to Jail? Suppose, one is convicted in the past have we not sent him to jail? He should be sent to jail. Therefore it is a matter of criminal proceedings Therefore, I submit that he must be brought before the House and he must be heard and what are the allegations we make...

Mr. Speaker.--He should be brought or present?

Sri B. Basavalingappa.--He is a member of this House. He must be present. If not today, day after tomorrow or whenever the House meets here.

(Interpution)

Mr. Speaker.—He should be brought ಅನ್ನುವುದಕ್ಕೂ He should be present ಎಂದು ಹೇಳುವುದಕ್ಕೂ ವ್ಯತ್ಯಾಸ ಇದೆ. ನೀವು ಯಾವುದು ಹೇಳುತ್ತೀರಿ. ಏಕೆಂದರೆ ಈ ಸದನದ ಸದಸ್ಯರಿಗೆಲ್ಲರಿಗೂ ಗೌರವ ಇದೆ...

Sri B. Basavalingappa.—He should be present. May I ask you a simple question? Are you honouring Kaul and Shakdhar? If you are honouring whatever is written in Kaul and Shakdher as a matter of procedure the same will have to be followed. If you are not honouring Kaul and Shakdher then a time will come when we will have to completely take out this Kaul and Shakdher and then follow our own rules without any precedents. Therefere, I appeal to your good sense that he should be called to be present here and take a decision.

Sri Vedantha Hemmige.—Mr. Speaker Sir, there is a privilege motion before you. It is only preliminary discussion that is going on the privilege motion. We have to convince you whether it is admissible or not. When you give a decision whether it is admissible or not, then you can call the member for an explanation. Till then, till you are going to take a decision on the admissibility, it is only a preliminary discussion and you cannot call the member to be present here. Member's presence is not necessary. Discussion is going only on the privilege motion which is allowed for a discussion. You-have not admitted it. When you feel that it could be admitted then you can call the member to give an explanation and then you can take a final decision. So it is only a preliminary discussion. There is no necessity to call for the member's presence.

Sri H. D. Devegowda.—With your permission......

MR. SPEAKER.—I have permitted you.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಅನುಮತಿ ಕೊಟ್ಟಿದ್ದಕ್ಕಾಗಿ ಋಣಿಯಾಗಿದ್ದೇನೆ. ಈ ಹಕ್ಕುಚ್ಯುತಿ ಬಗ್ಗೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ನಿಮ್ಮ ಅನುಮತಿ ಕೇಳಿ ಚರ್ಚೆ ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಹಕ್ಕುಚ್ಯುತಿ ಸಂಬಂಧದಲ್ಲಿ, ಯಾರು ಹಕ್ಕುಚ್ಯುತಿಗೆ ಬಾಧಕವನ್ನು ತರುತ್ತಾರೆ, ಆ ವ್ಯಕ್ತಿ ಈ ವಿಷಯ ಚರ್ಚೆಯಾಗುವಾಗ ಸದನದಲ್ಲಿ ಇರಬೇಕೇ ಎನ್ನತಕ್ಕಂಥಾದ್ದು.

ಶ್ರೀ ಎಂ. ವೀರಪ್ಪಮೊಯಿಲಿ.—ಈವನ್ ರೈಸ್ ಮಾಡುವಾಗಲೂ ಇರಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಸದನದಲ್ಲಿರತಕ್ಕಂಥ ಸದಸ್ಯರು ಈ ರೀತಿ ಹಕ್ಕುಚ್ಯುತಿ ಮಾಡಿದ್ದರೆ ಸದನದಲ್ಲಿ ಇರುವುದಕ್ಕೆ ಸಾಧ್ಯ. ಸದನದ ಹೊರಗಡೆ ಇರತಕ್ಕಂಥ ಒಬ್ಬ ವ್ಯಕ್ತಿ, ಈ ಸದನವನ್ನು ನಿಂದನೆ ಮಾಡಿ, ಈ ಸದನದ ಒಬ್ಬ ಸದಸ್ಯರನ್ನು ನಿಂದನೆ ಮಾಡಿ ಹಕ್ಕುಚ್ಯುತಿಯನ್ನು ಉಂಟು ಮಾಡಿದ್ದರೆ ಅಂತಹ ವ್ಯಕ್ತಿಯನ್ನು ಈ ಸದನದಲ್ಲಿ ಹಕ್ಕುಚ್ಯುತಿ ವಿಷಯದ ಬಗ್ಗೆ ಚರ್ಚೆ ಆಗುವಾಗ. Karanjia was summoned later on. I am not an advocate.

SRI. K. H. PATIL.--Sir,......

(Interruption)

SRI H. D. DEVEGOWDA.---Mere commonsense and how the Procedings takes place in this House for the last/last 20 years I have been observing, I would like to ask you to throw light on this issue.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ದಯವಿಟ್ಟು ಕುಳಿತುಕೊಳ್ಳಿ.

(Interruption)

SRI H. D. DEVEGOWDA.—If any body commits a breach of privilege of this House, can such a man be brought before the House ? He should be given chance to explain. Some member can move a motion to refer it to the privileges Committee. After the receipt of the Committee's report, you can summon that man for admonition. Therefore, at this stage, such a thing cannot happen, If I am correct.

SRI R. VENKATARAMAIAH.—Sir......

SRI H. D. DEVEGOWDA.—It's of academic interest. Please enlighten us. This is the preliminary submission you are making. Supposing if Mr. Hegde is not the Member of this House, then what happens ? There cannot be two things. Please enlighten us.

ಶ್ರೀ ಆರ್. ವೆಂಕಟರಾಮಯ್ಯ.—ಕ್ಲಿಯರ್ ಡಿಸ್ಟಿಂಕ್ಷನ್ ಇದೆ ಸ್ವಾಮಿ. ಕೌಲ್ ಅಂಡ್ ಶಕ್ಧರ್‌ನಲ್ಲಿ ಹೇಳುವುದು......

ಅಧ್ಯಕ್ಷರು.—ಅವರು ಹೇಳಲಿ ತಡೆಯಿರಿ, ನಿಮಗೆ ಅವಕಾಶ ಕೊಡುತ್ತೇನೆ, ಆಮೇಲೆ ನೀವು ಓದಿರಿ,

SRI H. D. DEVEGOWDA.—Please enlighten us. This is of academic interest.

ಶ್ರೀ ಆರ್. ವೆಂಕಟರಾಮಯ್ಯ.—ಡಿಸ್ಟಿಂಕ್ಷನ್ ಇದೆ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಶ್ರೀ ದೇವೇಗೌಡರು ಕೇಳಿರುವಂತಹ ಪ್ರಶ್ನೆಗೆ ಸ್ಪಷ್ಟವಾಗಿ ಕೌಲ್ ಅಂಡ್ ಶಕ್ಧರ್‌ನಲ್ಲಿ ಉತ್ತರ ಇದೆ. ಆ ವಿಷಯದಿಂದಲೇ ಅವರು ಪ್ರಾರಂಭ ಮಾಡುತ್ತಾರೆ ಅವರು ಏನು ಹೇಳುತ್ತಾರೆ ಎಂದರೆ. I would like to quote. 'Complaint againts member', which says thus:

> "When a complaint of an alleged breach of privilege of contempt of the House is made by a member, the proceedings in the House dealing with that complaint differ some what according as the person implicated is a member of a stranger."

SRI H. D. DEVE GOWDA.—To clear the doubts, if the House minds, even it can refer it to Privileges Committee. The Privileges Committee enjoys all the characteristics of this House. If this matter is going to be referred then that gentlemen should appear these.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ ಮುಕ್ತಾಯ ಮಾಡಿರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಳ್ಳೆಯ ಆರ್ಗ್ಯುಮೆಂಟ್ ಇದೆ, ಬೇರೆ ಕೇಸ್‌ಗೆ ರಿಸರ್ವ್ ಇಡಿರಿ. It is a very bad case you are arguing.

ಶ್ರೀ ಕೆ. ಹೆಚ್. ಶ್ರೀನಿವಾಸ್. –The Privilege Committee is clothed with the entire authority of this House. If he is a Member, there is one thing, if he is not a member i.e., stranger then there is another procedure. ಆದುದರಿಂದ ಅದೇನೂ ಬೇರೆ ಅಲ್ಲ. ಅವರಿಗೂ ಅಧಿಕಾರ ಇದೆ. ಆದರೆ ಹೌಸ್‌ನಲ್ಲಿ ಯಾವರೀತಿ ನಡೆದುಕೊಳ್ಳಬೇಕೆಂದು ಈ ಪ್ಯಾರಾಗ್ರಾಫ್ ಇರುವುದು.

> "......The main point of difference in the two cases is that before making a complaint against a member a notice is given to him beforehand as a matter of courtesy. Further when a Member seeks to raise question of privilege against another Member, the speaker, as already stated, before giving his consent to the raising of the matter in the House, gives an opportunity to the Member complained against..."

The Speaker has to give opportunity to the man who is implicated.

> "......before giving his consent to the raising of the matter in the House, gives an opportunity to the member complained against, to place before the Speaker or the House such facts as he may have on the question......"

The decision that Speaker gives about allowing the matter to be raised also is dependant on the explanation on the facts that is to be put forward by the man who is implicated. So, when he is a member, it differs. It further says.

> "Where a complaint of an alleged breach of privilege or contempt of the House was based on a newspaper report of

> an alleged statement made by a Member outside the House, which the member concerned denied having made, the Speaker accepted the statement of that member in preference to what had appeared in the newspaper, and withheld his consent to the raising of the question of privilege''.

Therefore, you will have to ask that Memeber to be present. The concluding para is like this :—

> ''When a complaint against a member is brought before the House, it is essential that the member concerned should be present in the House; in case, he is not present, the making of the complaint is deferred until the following sitting. Where the member complained against is present in the House when the complaint is made, he is heard in explanation and then directed to withdraw from the House by the Speaker''.

The Speaker has heard the preliminary submission on the complaint raised. It is obligatory on the part of the Speaker to heard the man who is implicated when he is the Member of the House. If he has some facts, he should be allowed to put it before the House. There is subtle distinction between two things. The Practice and Procedure of Parliament written by Kaul and Shakdar is very clear. At the preliminary stage itself, the Member who is implicated shall be present and if not deferred. Therefore, I don't thing there is any other scope for any explanation.

(INTERRUPTION)

೧-೩೦ ಪಿ.ಎಂ.

† ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ನಿರ್ದಿಷ್ಟವಾದಂಥ ಸಮಸ್ಯೆ ಏನು ಎಂದರೆ ಈ ಸದನದ ಸದಸ್ಯರಾದವರೊಬ್ಬರ ಮೇಲೆ ಏನಾದರೂ ಆಪಾದನೆಯನ್ನು ಈ ಸದನದಲ್ಲಿ ತಂದಾಗ ಸಂಬಂಧಪಟ್ಟ ಸದಸ್ಯರು ಸದನದಲ್ಲಿ ಇರಬೇಕೇ ಬೇಡವೇ ಎನ್ನುವುದು. ಸನ್ಮಾನ್ಯ ಸದಸ್ಯರಾದಂಥ ವೀರಪ್ಪಮೊಯಿಲಿಯವರು, ಈ ಸದನದ ಒಬ್ಬ ಸದಸ್ಯನ ಮೇಲೆ ಆಪಾದನೆ ತಂದಂಥ ಸಮಯದಲ್ಲಿ ಸಂಬಂಧಪಟ್ಟ ಸದಸ್ಯರು ಈ ಸದನದಲ್ಲಿ ಇರಲೇಬೇಕೆನ್ನುವ ವಾದವನ್ನು ಮುಂದಿಟ್ಟಿದ್ದಾರೆ. ಅವರ ವಾದಕ್ಕೆ ಪುಷ್ಟಿ ಕೊಡುವುದಕ್ಕೆ ಶಕ್ದರ್ ಮತ್ತು ಕೌಲ್ ಅವರ ಕಾಮೆಂಟ್ರಿಯನ್ನು ಜೋಡಿಸಿದ್ದಾರೆ. ಆ ಕಾಮೆಂಟ್ರಿಯನ್ನು ಒಪ್ಪುವುದು, ಬಿಡುವುದು ಅಧ್ಯಕ್ಷರಾದ ತಮಗೆ ಬಿಟ್ಟಿದ್ದು. ಇನ್ನು ಎರಡನೆಯದಾಗಿ ಈ ಕಡೆಯ ಮಾನ್ಯ ಸದಸ್ಯರುಗಳು, ಸಂಬಂಧಪಟ್ಟ ಸದಸ್ಯರು ಸದನದಲ್ಲಿ ಹಾಜರಿರಲೇಬೇಕು ಎನ್ನುವುದು ಸರಿಯಲ್ಲ ಎನ್ನುವ ವಾದವನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಆಪಾದನೆಯನ್ನು ಯಾವ ಸದಸ್ಯರ ಮೇಲೆ ಹೊರಿಸಿದ್ದಾರೋ ಆ ಸದಸ್ಯರು ಸದನದಲ್ಲಿ ಹಾಜರಿರಬೇಕೇ ಬೇಡವೇ ಎನ್ನುವ ಚರ್ಚೆಯು ಸಾಕಷ್ಟು ಸಮಯದಿಂದ ನಡೆದಿದೆ. ಈ ಚರ್ಚೆಯ ಬಗ್ಗೆ ಎರಡೂ ಕಡೆಯವರ ವಾದ ವಿವಾದಗಳನ್ನು ನಾವು ಕೇಳಿದ್ದೇವೆ. ಈ ಚರ್ಚೆಯಿಂದ ಯಾರಿಗೂ ಹೊಟ್ಟೆ ತುಂಬುವ ಕೆಲಸವಾಗುವುದಿಲ್ಲ. ಇದೇ ಸಮಸ್ಯೆ ಆ ಕಡೆಯ ಮಾನ್ಯ ಸದಸ್ಯರುಗಳ ಮೇಲೂ ಬರುವಂಥ ಸಂದರ್ಭ ಇರುತ್ತದೆ. ಆವಾಗಲೂ ಇದೇ ರೀತಿ ಆರ್ಗ್ಯುಮೆಂಟ್ ಮಾಡಬೇಕಾಗುತ್ತದೆ. ಇದರ ಬಗ್ಗೆ ಯಾವುದಾದರು ಒಂದು ರೂಲಿಂಗ್‌ನ್ನು ತಾವು ಕೊಡುವುದಾದರೆ ಅದಕ್ಕೆ ನಾವೆಲ್ಲರೂ

ಬದ್ಧರಾಗಿ ಒಪ್ಪಿಕೊಳ್ಳುತ್ತೇವೆ. ಆದರಿಂದ, ಈ ಚರ್ಚೆಯನ್ನು ಇಲ್ಲಿಗೇ ಮುಗಿಸಬೇಕೆಂದು ನನ್ನ ಅಭಿಪ್ರಾಯ. ಇದಕ್ಕಿಂತ ಮುಖ್ಯವಾದ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡುವುದು ನನ್ನ ಕರ್ತವ್ಯವಾಗಿದೆ. ಇಲ್ಲಿಗೇ ಈ ಚರ್ಚೆಯನ್ನು ಮುಕ್ತಾಯ ಮಾಡಬೇಕೆಂದು ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ತಾವು ಎರಡೂ ಕಡೆಯವರ ಆರ್ಗ್ಯುಮೆಂಟ್‌ನ್ನು ಕೇಳಿದ್ದೀರಿ. ದಯಮಾಡಿ ಒಂದು ರೂಲಿಂಗ್‌ನ್ನು ಕೊಟ್ಟು ಈ ಪ್ರಸ್ತಾಪವನ್ನು ಇಲ್ಲಿಗೇ ಮುಗಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ವೇದಾಂತ ಹೆಮ್ಮಿಗೆಯವರು, ಈಗ ಮಾತನಾಡಲಿ.

SRI VEDANTHA HEMMIGE.—He said that when a complaint is made on a Member, he should be present. On whose direction, he should be present ? I would like to raise a Breach of Privilege issue on a Member but who is the man to direct that the Member to be present ? Here, it is the Speaker. If you are convinced on the complaint if you are convinced on the facts of the complaint then you, the Hon'ble Speaker can call the Member. A member can raise a Breach of Privilege issue on another member. He cannot immediately be present here. The Hon'ble Speaker has to be convinced whether there is a fact in the complaint or not. You are the Authority here. You have to see whether the complaint which has raised is genuine or not. You have to convince whether there are facts or not. If you are convinced, then, you can call the Member and as such, the point raised by Mr. Srinivas is not correct.

ಅಧ್ಯಕ್ಷರು.—ಶ್ರೀ ಬಿ. ಎ. ಉಮರಬ್ಬ ಅವರು.

ಶ್ರೀ ಬಿ. ಎ, ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಕೌಲ್ ಅಂಡ್ ಶಕ್ಧರ್‌ರವರ ಪ್ರಕಾರ ಒಬ್ಬ ವ್ಯಕ್ತಿಯ ಮೇಲೆ ಆಪಾದನೆಗಳು ಬಂದಾಗ, ಆಪಾದನೆ ಬಂದಂಥ ವ್ಯಕ್ತಿ ಸದನದ ಸದಸ್ಯನಾಗಿದ್ದರೆ, ಸದನದಲ್ಲಿ ಚರ್ಚೆಯಾಗುವ ಸಮಯದಲ್ಲಿ ಇರಲೇಬೇಕೆಂದು ಹೇಳಲಾಗಿದೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಸ್ಪಷ್ಟಪಡಿಸಿದ್ದಾರೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ಕೇಳಿದ ದಿನ ಸನ್ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದರು ಎಂದರೆ, ಇವತ್ತು ಚರ್ಚೆ ನಡೆಸುವುದಕ್ಕಿಂತ ನಾಳೆ ಚರ್ಚೆ ನಡೆಸಿದರೆ ಒಳ್ಳೆಯದು. ಏಕೆಂದರೆ ಮಾಜಿ ಮುಖ ಮಂತ್ರಿಗಳು ಡೆಲ್ಲಿಯಿಂದ ನಾಳೆ ಬರುತ್ತಾರೆ. ನಾಳೆ ದಿವಸ ಅವರು ಸದನಕ್ಕೆ ಬರಬಹುದು, ಸಂಬಂಧಪಟ್ಟವರು ಸದನದಲ್ಲಿದ್ದರೆ ಚರ್ಚೆಗೆ ಉತ್ತಮವೆಂದು ಹೇಳಿದ್ದರು. ಆದ್ದರಿಂದ, ಮಾಜಿ ಮುಖ್ಯಮಂತ್ರಿಯವರು ಈ ಸದನದಲ್ಲಿ ಹಾಜರಿದ್ದು ಅವರ ಬಗ್ಗೆ ಮಾಡುವ ಚರ್ಚೆ ಸಮಯದಲ್ಲಿ ಭಾಗವಹಿಸಬೇಕು. ಇನ್ನೊಂದು ವಿಷಯವನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ನಿನ್ನೆ ದಿನ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಯವರು ಒಂದು ಪತ್ರಿಕಾ ಗೋಷ್ಠಿಯನ್ನು ಕರೆದು ಒಂದು ಮಾತನ್ನು ಹೇಳಿದ್ದಾರೆ. ನಾನು ಸದನದಲ್ಲಿ ಇದ್ದ ಪಕ್ಷದಲ್ಲಿ ಸದಸ್ಯರುಗಳು ಮುಕ್ತವಾಗಿ ತಮ್ಮ ಮನಸ್ಸಿಗೆ ಬಂದದ್ದನ್ನೆಲ್ಲಾ ಹೇಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ನಾನು ಸದನಕ್ಕೆ ಹೋಗಲಿಲ್ಲವೆಂದು ಹೇಳಿದ್ದಾರೆ ಈ ಮಾತು ತೀವ್ರ ಸಂಶಯಕ್ಕೆ ಎಡೆಕೊಟ್ಟಿದೆ. ಅವರು ಸದನದಲ್ಲಿ ಇದ್ದರೆ ಸದಸ್ಯರುಗಳು ಮುಕ್ತವಾಗಿ ಮಾತನಾಡುವುದಿಲ್ಲ ಎಂದರೆ, ಸದಸ್ಯರುಗಳು ಅವರಿಗೆ ಹೆದರಿಕೊಂಡು ಮಾತನಾಡುವುದಿಲ್ಲವೆ ? ಅಥವಾ ನಾಚಿಕೊಂಡು ಮಾತನಾಡುವುದಿಲ್ಲವೆ ? ಅಥವಾ ಅವರ ಮತ್ತು ಸದಸ್ಯರುಗಳ ಒಳಗಿನ ಸಂಬಂಧದಿಂದ ಏನಾದರೂ ಮಾತನಾಡುವುದಿಲ್ಲವೇ ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಇದು ಯಾವುದೂ ಅಲ್ಲವೆಂದರೆ ನನ್ನ ಮನಸ್ಸಿಗೆ ಒಂದು ಬರುತ್ತದೆ. ಏನೆಂದರೆ, ಈ ಸಭೆಯನ್ನು ಎದುರಿಸುವುದಕ್ಕಾಗದೇ ಸಭೆಯ ಹೊರಗಡೆ ಉತ್ತರನ ಪೌರಷವನ್ನು ತೋರಿಸುತ್ತಿದ್ದಾರೋ ಎನಿಸುತ್ತದೆ. ಅರ್ಜುನನಿಗೆ ಹೆದರಿ ದುರ್ಯೋಧನನ್ನು ವೈಶಂಪಾಯನ ಸರೋವರದೊಳಗೆ ಸೇರಿಕೊಂಡಿರುವಂತೆ ನಮ್ಮ ಮಾಜಿ ಮುಖ್ಯಮಂತ್ರಿಗಳು ಸೇರಿಕೊಂಡಿರುವರೇನೋ ಎನಿಸುತ್ತದೆ. ಆದ್ದರಿಂದ,

ಮಾಜಿ ಮುಖ್ಯಮಂತ್ರಿಯವರನ್ನು ಈ ಅಖಾಡಕ್ಕೆ ಕರೆಸಿದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಕ್ಕುತ್ತದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರ ಮಾತನ್ನು ನಾನು ಗಂಭೀರವಾಗಿ ಕೇಳಿದ್ದೇನೆ, ಅವರು ಅನುಭವದಿಂದ ಹೇಳುತ್ತಾರೆ ಎಂದುಕೊಂಡಿದ್ದೆ. ಆದರೆ ಅವರು ಏನೂ ಹೇಳಲಿಲ್ಲ. ತಮಗೇ ಬಿಟ್ಟಿದ್ದೇನೆಂದರು. ಅವರೇನಾದರೂ ಹಾಗೇ ಮಾಡಿ ಹೀಗೆ ಮಾಡಿ ಎಂದು ಹೇಳಿದ್ದರೆ ಅವರಿಗೆ ಕೃತಜ್ಞನಾಗಿರುತ್ತಿದ್ದೆ. ಆದರೆ ಅವರು ನಮ್ಮೆಲ್ಲರಿಗಿಂತ ತಾವು ದೊಡ್ಡವರು, ತಮಗಿಂತ ಸದನ ದೊಡ್ಡದು ಎಂದು ಹೇಳಿದ್ದರು. ಶ್ರೀ ಉಮರಬ್ಬ ಅವರು ಹೇಳಿದರು. ಉತ್ತರ ಕುಮಾರನ ಪೌರುಷದಂತೆ ಬೇರೆ ಕಡೆ ಪತ್ರಿಕಾಗೋಷ್ಠಿಯನ್ನು ಮಾಡಿ ತಲೆಗೆ ತೋಚಿದನ್ನು ಹೆಗಡೆಯವರು ಈ ಸದನದ ಬಗ್ಗೆ ಬಹಳ ಲಘುವಾಗಿ ಮಾತನಾಡಿದ್ದಾರೆ. ಇದಕ್ಕೆಲ್ಲಾ ಅವರೇ ಉತ್ತರ ಕೊಡಬೇಕು ಎಂದು. ಇಲ್ಲಿರುವ ನಾವು ಏನು ಈ ಅಜರ್ನ್‌ಮೆಂಟ್ ಮೋಷನ್ ತಂದಿದ್ದೇವೆ. ಅದರ ಬಗ್ಗೆ ಮಾನ್ಯ ಶ್ರೀ ಖರ್ಗೆಯವರು ಒಂದು ಮಾತನ್ನು ಹೇಳಿದರು.

> "When it was pointed out that the Government. had persuaded the Opposition to defer discussion on the phone bugging episode by a day since it would facilitate Mr. Hegde to be present in the House, Mr. Hegde declared that he deliberately did not attend the House."

ಇದರಲ್ಲಿ ಏನಾಗುತ್ತದೆ ಎಂದರೆ ಅಡ್ಜರ್ನ್‌ಮೆಂಟ್ ಮೋಷನ್ ಇದಕ್ಕೆ ಅನ್ವಯಿಸುತ್ತೋ ಇಲ್ಲವೋ ಅನ್ನೋದು ತಮಗೆ ಬಿಟ್ಟಿದ್ದು. ಅದರ ಬಗ್ಗೆ ನಾವು ಒತ್ತಾಯ ಮಾಡುವುದಿಲ್ಲ, ಆದರೆ ಒಂದು ಪ್ರಿವಿಲೇಜ್ ಮೋಷನ್‌ನಲ್ಲಿ ಸಂಬಂಧಪಟ್ಟ ಆರೋಪಿಯು ಇಲ್ಲಿ ಇರಲೇಬೇಕಾಗುತ್ತದೆಂದು ಸಾಕಷ್ಟು ಡಾಕ್ಯುಮೆಂಟ್ಸ್ ಹೇಳುತ್ತವೆ. ಆಮೇಲೆ ಅದು ಪ್ರೊಸೀಜರ್‌ನಲ್ಲೂ ಇದೆ. ಅದರ ಪ್ರಕಾರ ನಿಮ್ಮ ಅಧಿಕಾರವನ್ನು ಬಳಸಿ ನಿರ್ದಾಕ್ಷಿಣ್ಯವಾಗಿ ಅವರನ್ನು ಇಲ್ಲಿಗೆ ಕರೆದು ಒಂದು ಸಂಪ್ರದಾಯವನ್ನು ಎತ್ತಿ ಹಿಡಿಯುತ್ತೀರೆಂದು ಹೇಳುತ್ತೇನೆ.

† ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷರೇ ಈ ಪ್ರಿವಿಲೇಜ್ ಮೋಷನ್‌ನಲ್ಲಿ ಏನು ಇದೆ ಅದು ಕೌಲ್ ಅಂಡ್ ಶಕ್ದರ್ ಅನ್ನು ಅನ್ವಯಿಸಿದರೆ ಸದನದ ಮುಂದಿರುವ ಕ್ರಿಯಾಲೋಪಸರಿಯಾದದ್ದು ಅನಿಸುತ್ತದೆ. ಇದೇ ಸದನದಲ್ಲಿ ಹಿಂದೆ ದೊಡ್ಡದೊಡ್ಡ ಮಂತ್ರಿಗಳು ದೊಡ್ಡದೊಡ್ಡ ನಾಯಕರು ಕೌಲ್ ಅಂಡ್ ಶಕ್ದರ್ ಮೇಲೆ ಚರ್ಚೆ ಮಾಡಿದ್ದಾರೆ. ಅವರು ಸಹ ಅನೇಕ ಸಲ ನಾವು ಮಾತನಾಡುವುದಕ್ಕೆ ಎದ್ದಾಗಲೆಲ್ಲಾ ಕೌಲ್ ಅಂಡ್ ಶಕ್ದರ್ ಅನ್ನು ತೋರಿಸಿ ನಮ್ಮನ್ನು ಕೂರಿಸಿದ್ದಾರೆ. ಆದರೆ ಇವೊತ್ತು ಮಾನ್ಯ ಬೊಮ್ಮಾಯಿಯವರೇ ಅದನ್ನು ಗೋಸ್ಪೆಲ್ ಅಲ್ಲ ಎಂದು ಹೇಳಿದರು. ಇವೊತ್ತಿನ ದಿವಸ ಮುಖ್ಯ ಮಂತ್ರಿಯವರ ಸ್ಟೇಟ್‌ಮೆಂಟ್ ನೋಡಿದರೆ ಅದು ಕಾನೂನಲ್ಲ, ನಾವು ಮಾಡಿದ ರೂಲ್ಸ್ ಅದೇನಿದೆಯೋ ಅದನ್ನು ನೋಡೋಣ ಎಂದು ಹೇಳಿದರು. ಅದರಲ್ಲೂ ಕೂಡ ಅನೇಕ ಸಲ ಸದಸ್ಯರು ಯಾವುದೇ ವಿಚಾರ ಬಂದಾಗ ತಾವು ಎಕ್ಸ್‌ಪ್ಲನೇಷನ್ ಕೊಡಿ ಎಂದು ಕೇಳಿದ್ದು ಉಂಟು ಆದರೆ ಇವೊತ್ತು ಈ ವಿಷಯ ಏಕೆ ಹೀಗಾಯಿತೋ ಗೊತ್ತಿಲ್ಲ. ದೊಡ್ಡ ಮನುಷ್ಯರು ಅಂತ ಅವರಿಗೆ ಎಕ್ಸ್‌ಮ್‌ಷನ್ ಕೊಡಬೇಕಾ ? ಅವರುಗಳು ಮಾಡಿರುವ ಸ್ಟೇಟ್‌ಮೆಂಟಿನಲ್ಲೇ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಚೀಫ್ ಮಿನಿಸ್ಟರ್ ಆಗಿದ್ದಾಗ ಮಾಡುತ್ತಿದ್ದದು ನನಗೆ ಗೊತ್ತಾಗುತ್ತಲೇ ಅದನ್ನು ಬಂದ್ ಮಾಡಿದೆ ಎಂದು ಹೆಗಡೆಯವರು ಮತ್ತು ನಾನು ಚೀಫ್ ಮಿನಿಸ್ಟರ್ ಆದ ಮೇಲೆ ಅದನ್ನು ಬಂದ್ ಮಾಡಿ ಆತ ಆರ್ಡರ್ಸ್ ಮಾಡಿದ್ದೇನೆ ಎಂದು ಮಾನ್ಯ ಬೊಮ್ಮಾಯಿಯವರು ಹೇಳುತ್ತಿದ್ದಾರೆ. ಅಂದರೆ ಇಬ್ಬರೂ ಅದನ್ನು ಒಪ್ಪಿಕೊಂಡಿದ್ದಾರೆ ಎಂದಾಯಿತು. ಮಾನ್ಯ ಹೆಗಡೆಯವರು ನೆನ್ನೆ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ [illegible] ಎಲ್ಲಿಗ [illegible] ಕೆಟ್ಟಿದೆ ಅವರು ಬರಬೇಕಾಗಿತ್ತು. ನಾನು ಹೊರಗಡೆ ಇದ್ದರೆ ಅವರು ಚೆನ್ನಾಗಿ ಮಾತನಾಡುತ್ತಾರೆ ಇಲ್ಲದಿದ್ದರೆ ಮಾತನಾಡುವುದಿಲ್ಲ ಎಂದು ಹೇಳಿದ್ದಾರೆ ಈ ಸದನ ಇರೋದು ಚರ್ಚೆ ಮಾಡುವುದಕ್ಕೆಂದೇ ಅದು ಹೆಗಡೆ ಇರಬಹುದು ದೇವೇಗೌಡರು ಇರಬಹುದು ಅಥವಾ ಇನ್ಯಾರೇ ಇರಬಹುದು. ಅವರಿಂದ ಈ ಸದನಕ್ಕೇ ಸದಸ್ಯರಿಗೆ ಕುಂದುಂಟಾಗಿದೆ ಎಂದಾದರೆ ಅವರ ಬಗ್ಗೆ ಚರ್ಚೆ ಮಾಡುವುದು ನಮ್ಮ ಹಕ್ಕು. ಅಂಥವರನ್ನು ನಿಮ್ಮ ಅಧಿಕಾರ ಬಳಸಿ ಇಲ್ಲಿಗೆ ಕರೆಸಬೇಕು, ಉತ್ತರ ಕೊಡಿಸಬೇಕು.

ಶ್ರೀ ವೀರಣ್ಣ —ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರ ಆರ್ಗ್ಯುಮೆಂಟ್ ಕೇಳಿದರೆ ಎರಡು ಮಾತು ಹೇಳಬೇಕು ಎನಿಸುತ್ತದೆ. ಶ್ರೀಮಾನ್ ಖರ್ಗೆಯವರು ವಕೀಲರಾಗಿದ್ದವರು ಮಾನ್ಯ ಮೊಯಿಲಿಯವರು ವಕೀಲರಾಗಿದ್ದವರು. ಅವರ ಆರ್ಗ್ಯುಮೆಂಟ್ ಹೇಗೆ ಎಂದರೆ a man while filing a private complaint before a Court against ABCDE and insisting on the same day the presence of the accuced. ಆಗ ಮ್ಯಾಜಿಸ್ಟ್ರೇಟ್ ಅನ್ನು ಕನ್‌ವಿನ್ಸ್ ಮಾಡಿ, if the magistrate is convinced he will issue notice to the accused. ಪ್ರೈಮಾಫೇಸಿ ಕೇಸಿದ್ದರೆ ಆಕ್ಯೂಸ್ಡ್ ನೋಟಿಸ್ ಕೊಡುತ್ತಾರೆ ಹಾಜರಾಗಬೇಕೆಂದು. Otherwise the judge will refer the matter to theCircle Inspector of Police for a report. I think the presence of Mr. Ramakrishna Hegde or the person against whom the privilege motion is moved is not at all necessary at this stage ಅವರೂ ಕನ್‌ವಿನ್ಸ್ ಆಗಿದ್ದಾರೆ ಕೆಟ್ಟ ಕೇಸೆಂದು. ಈ ಸ್ಟೇಜಲ್ಲಿ ಹಾಜರಾತಿ ಅನಾವಶ್ಯಕ ಎಂದು ಅವರಿಗೂ ಗೊತ್ತು. At this stage Ramakrishna Hegde's presence is not at all necessary. In such a manner you can give the ruling. That is my request.

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಇಲ್ಲೆಲ್ಲಾ ಬಹಳ ಜನ ಅಡ್ವೋಕೇಟ್ಸ್ ಇದ್ದೀವಿ. ಏಕೆ ಇಷ್ಟು ಹೊತ್ತು ಮಾನ್ಯ ಬೊಮ್ಮಾಯಿಯವರು ಕಾನೂನನ್ನು ತಿರುಗಾಮುರುಗಾ ಹೇಳಿದ್ದಾರೋ ಗೊತ್ತಿಲ್ಲ. ನಮಗೆ ಕಾನೂನಿದೆ ದೊಡ್ಡ ಜನಗಳು ತೋರಿಸಿಕೊಟ್ಟಿರೊ ಮಾರ್ಗದರ್ಶನವಿದೆ. ನೀವಿದ್ದೀರಿ ಸಭೆ ನಡೆಸುವುದಕ್ಕೆ. ಈ ಕಾನೂನಲ್ಲಿ ಮಾನ್ಯ ಹೆಗಡೆಯವರು ಬರಬೇಕೋ ಬೇಡವೋ ಅಂತಾ ಏನಿದೆ ಅದನ್ನು ಅವರು ಒಪ್ಪದಿದ್ದರೆ ಅದಕ್ಕೆ ವಿರುದ್ಧವಾದದ್ದನ್ನು ಬೇರೆ ಯಾವುದಾದರೂ ಕಾನೂನಿನ ಪುಸ್ತಕದಲ್ಲಿ ತೋರಿಸಲಿ. ಈಗ ಅವರು ತೋರಿಸದಿದ್ದರೆ ನೀವು ರೂಲಿಂಗ್ ಕೊಡಬೇಕು. ತಲೆಕೆಡಿಸಿಕೊಳ್ಳುವ ಪ್ರಶ್ನೆಯಲ್ಲ, ಇದು ಸಿಂಪಲ್ಲು. ಒಂದು ಪ್ರೊಸೀಸರ್‌ನಲ್ಲಿ ಇಲ್ಲದಿದ್ದರೆ ಹೈಕೋರ್ಟ್, ಸುಪ್ರೀಂಕೋರ್ಟ್‌ಗಳ ಜಡ್ಜ್ ಏನಾದರೂ ಇದೆಯೇ, ಪಾರ್ಲಿಮೆಂಟಿನಲ್ಲೇನಾದರೂ ಇದೆಯಾ ಅಂತ ಹೇಳಬೇಕು. ಈ ಮನೆಗೆ ೧೯೭೭ರಿಂದಾನೂ ನಾನೂ ಸದಸ್ಯನಾಗಿದ್ದೇನೆ. ಆವತ್ತಿನಿಂದ ಇವತ್ತಿನವರೆಗೂ ಬೈಬಲ್ಲಿನ ತರಹ ಇದ್ದದ್ದು ಕೌಲ್ ಅಂಡ್ ಶಕ್ದರ್. ಮಾನ್ಯ ಬೊಮ್ಮಾಯಿಯವರು ಚೀಫ್ ಮಿನಿಸ್ಟರ್ ಆಗಿದ್ದಾರೆ ಅಂತ ಅದನ್ನು ಬದಲಾಯಿಸ್ಬೇಕಾ? ಅಥವಾ ಮಾನ್ಯ ಹೆಗಡೆಯವರಿಗೋಸ್ಕರ ಅದನ್ನ ಬದಲಾಯಿಸ್ಬೇಕೇ ನಾನು ಏನಾದರೂ ಅಪರಾಧಿಯಾಗಿದ್ದರೆ ಈ ಮಟ್ಟದಲ್ಲಿ ಚರ್ಚೆ ನಡೆಯುತ್ತಿತ್ತೇ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಲಕ್ಷ್ಮೀ ಸಾಗರ್‌ರವರೇ ಬೇರೆ ಪುಸ್ತಕ ಬರೆದಿದ್ದರೆ ನಾ ಒಪ್ಪಿಕೊಳ್ಳಬಹುದಾಗಿತ್ತು.

ಶ್ರೀ ಜಿ.ಎಸ್ ಶಿವನಂಜಪ್ಪ.—ಹೆಗಡೆ ಅಂತ ನೋಡಬಾರದು, ಶಿವನಂಜಪ್ಪ ಅಪರಾಧಿ ಎಂದು ತಿಳ್ಕೋಬೇಕು. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕು ಶ್ರೀ ವೈ ಕೆ. ರಾಮಯ್ಯನವರು ಏನು ಸಜೆಷನ್ ಕೊಟ್ಟಿದ್ದಾರೆ. ಇದರ ಬಗ್ಗೆ ಇಷ್ಟೊಂದು ಆರ್ಗ್ಯುಮೆಂಟ್ ಕೇಳತಕ್ಕಂಥಾದ್ದು ಇಲ್ಲ. ಅವರನ್ನು ಕರೆಯಿಸಬೇಕೆಂದು ನೀವು ನಿರ್ಣಯ ಮಾಡಿದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಮಾನ್ಯ ಮೊಯಿಲಿಯವರು ಪ್ರಸ್ತಾಪ ಮಾಡಿದಂತಹ ಪಾಯಿಂಟ್ ಆಫ್ ಆರ್ಡರ್ ಬಹಳ ಮುಖ್ಯವಾದುದು. ಈಗಾಗಲೇ ನಾವು ನೋಟೀಸ್ ಅನ್ನು ಕೊಟ್ಟಿದ್ದೇವೆ.

ಶ್ರೀ ಮು.ಭೂಪತಿ.—ನನ್ನ ಭಾಷಣ ಅರ್ಧಕ್ಕೆ ನಿಂತಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ ಅದರ ನಂತರ ತಮ್ಮ ಭಾಷಣವನ್ನು ಮುಂದುವರಿಸಿ. ಈ ಸದನದ ಹೊರಗಡೆ ಪ್ರೆಸ್ ಕಾನ್‌ಫರೆನ್ಸ್ ಮಾಡಿ. ಇನ್ನೊಂದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವಂತೆ ಮಾಡಿದ್ದಾರೆ, ಅವರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಈ ಸದನದಲ್ಲಿದ್ದರೆ ಡೀಟೇಲ್ ಆಗಿ ಚರ್ಚೆ ನಡೆಯುತ್ತಿರಲಿಲ್ಲ. ಮತ್ತು ಯಾರೂ ಆ ಧೈರ್ಯ ಸಹ ಮಾಡುತ್ತಿರಲಿಲ್ಲವೆಂದು ಹೇಳತಕ್ಕಂತಹ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅವರು ಆ

ರೀತಿ ಅರ್ಥ ಬರುವಂತೆ ಹೇಳಿದ್ದಾರೆ. ಇದರ ಅರ್ಥ ಏನಾಗುತ್ತದೆಂದರೆ, ಇದನ್ನು ರಿಬಟ್ ಮಾಡುವುದಕ್ಕೆ ಮತ್ತೊಂದು ಪ್ರೆಸ್ ಕಾನ್‌ಫರೆನ್ಸ್ ಕರೆಯುತ್ತಾರೆ. ಇದು ಆಗಬಾರದು ಎಂದು ಅವರು ಈ ಸದನದಲ್ಲಿರತಕ್ಕಂಥಾದ್ದು ಬಹಳ ಅವಶ್ಯಕ. ಮಾನ್ಯ ಮುಖ್ಯ ಮಂತ್ರಿಗಳಾಗಿ ಅವರು ಏನು ಕೆಲಸ ಮಾಡಿದ್ದಾರೆ ಏನೇನು ರಿಬಟ್ ಮಾಡಬೇಕೋ ಅದನ್ನು ಇಲ್ಲಿಯೇ ಮಾಡಲೀ ಅದು ಎಲ್ಲರಿಗೂ ಗೊತ್ತಾಗುತ್ತದೆ. ಅವರನ್ನು ಎದುರಿಸತಕ್ಕಂತಹ ಧೈರ್ಯ ನಮ್ಮ ಕಡೆಗೆ ಇದೆ ಇವರಿಗೆ ಧೈರ್ಯವಿಲ್ಲವೆಂದು ಅವರು ತಿಳಿದುಕೊಳ್ಳಬಾರದು. ನಾವು ಪಾಯಿಂಟ್ ಆಫ್ ಆರ್ಡರ್ ಏನು ತಂದಿದ್ದೇವೆ ಅದನ್ನು ಎತ್ತಿ ಹಿಡಿದು ನಾವು ಅವರನ್ನು ಕರೆಸಬೇಕು. ಸಂಪೂರ್ಣವಾಗಿ ನಮ್ಮ ಆರ್ಗ್ಯುಮೆಂಟ್ ಅನ್ನು ಅವರು ಕೇಳಿ ಉತ್ತರ ಕೊಡಲಿ. ಈ ಸದನ ಇದ್ದಾಗ ಅವರಿಗೆ ಏನು ಕೆಲಸ ಇದೆ. ಇಲ್ಲಿ ಬಂದು ಕುಳಿತು ಬೇಕಾಗಿಯೇ ಹೊರಗೆ ಹೋದರು ಬೇಕಿದ್ದರೆ ನೀವು ವೆರಿಫೈ ಮಾಡಿ. ನಿಮ್ಮ ಅಧಿಕಾರವನ್ನು ಉಪಯೋಗಿಸಿ ಮಾಡಿ. ಮಾನ್ಯ ದೇವೇಗೌಡರವರನ್ನು ಒಳಕ್ಕೆ ತರುವುದಕ್ಕೆ ಇಷ್ಟು ಪ್ರಯತ್ನ ಮಾಡಬೇಕಾಯಿತು. ನಾವು ಇಷ್ಟು ಜನ ಒತ್ತಾಯ ಮಾಡುತ್ತಿದ್ದೇವೆ ಅವರನ್ನು ಕರೆದುಕೊಂಡು ಬನ್ನಿ. ಸದನದ ಸಮಯ ವ್ಯರ್ಥವಾಗುತ್ತಿದೆ, ಇದರೊಳಗೆ ಪ್ರೆಸ್ಟೀಜ್ ಇಷ್ಯೂ ಯಾರದೂ ಇಲ್ಲ, ಅವರು ಸಮರ್ಪಕವಾದ ಉತ್ತರ ಕೊಡಲಿ ನಮಗೇನು ಗೊತ್ತಾಗುತ್ತದೆ ಅದನ್ನು ಹೇಳುತ್ತೇವೆ. ಅವರು ಯಾವ ರೀತಿ ಡಿಫೆಂಡ್ ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ ಆ ಮೇಲೆ ನೀವು ಒಂದು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಹೊರಕ್ಕೆ ಕಳಿಸುವುದು ಒಳಕ್ಕೆ ಕಳಿಸುವುದು ಎರಡೂ ಜನರ ಕೈಯಲ್ಲಿದೆ. ನಮ್ಮ ನಿಮ್ಮ ಕೈಯಲ್ಲಿ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಬರೀ ಮಾತಿನಲ್ಲೇ ಆಗುತ್ತದೆಂದು ತಿಳಿದು ಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಖರ್ಗೆಯವರು ಹೇಳಿದ್ದುದು ಏನೆಂದರೆ ಇದು ಒಂದು ಮ್ಯೂಸಿಕಲ್ ಚೇರ್‌ನಲ್ಲಿ ಅವರು ಹೋಗಬೇಕಾಯಿತು ತಾವು ಬರಬೇಕಾಯಿತು ಅವರು ಹೋಗುವಾಗ ಹಿಡಿದಂತಹ ಚೇರ್ ಅನ್ನು ನೀವು ಕುಳಿತುಕೊಳ್ಳುವುದಕ್ಕಾಗಲಿಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ಮ್ಯೂಸಿಕಲ್ ಚೇರ್ ಈ ಕಡೆಗೆ ಅಷ್ಟೇ ಅಲ್ಲ, ಅಲ್ಲೂ ಕೂಡ ನಡೆಯುತ್ತದೆ. ತಾವು ಅವರನ್ನು ಸರಿಸಿ ನೀವು ಕುಳಿತುಕೊಳ್ಳಬೇಕೆಂದು ದಿಲ್ಲಿಗೆ ಹೋಗಿದ್ದಿರಿ ಅದು ಆಗಲಿಲ್ಲ. ಮ್ಯೂಸಿಕಲ್ ಚೇರ್ ಎಲ್ಲಾ ಕಡೆ ಇದೆ. ಕಿಸ್ಸಾ ಕುರ್ಸಿ ಕಾ ಎಲ್ಲಾ ಕಡೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ ಕಿಸ್ಸ ಕುರ್ಸಿಕಾದಲ್ಲಿ ಎಲ್ಲೋ ಹೊರಗಿನ ರಿಂಗ್‌ನಲ್ಲಿರತಕ್ಕಂಥ ತಾವೇ ಬಂದುಬಿಟ್ಟಿರಿ. ಪಾಪ, ಆ ರಿಂಗ್‌ನಲ್ಲಿದ್ದಂಥ ದೇವೇಗೌಡರು ಬೇರೆ ಖುರ್ಚಿಯನ್ನು ಹಿಡಿಯಬೇಕಾಯಿತಲ್ಲ ಎಂದು ನಮಗೆ ವ್ಯಸನ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದಕ್ಕೆ ಹೇಳಿದ್ದೇನೆ. ಯಾರ ಲಕ್ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ೧೯೮೩ರಲ್ಲಿ ಯಾರೋ ಬರಬೇಕಾಗಿತ್ತು ಯಾರೋ ಬಂದರು, ೮೦ರಲ್ಲಿ ಯಾರೋ ಆಗಬೇಕಾಗಿದ್ದರೋ ಯಾರೋ ಆದರು. ೮೦ರಲ್ಲಿ ಹೆಸರು ಇದ್ದವರದೇ ಒಬ್ಬರು, ಆದವರೇ ಒಬ್ಬರು, ಏನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು.—ಮಾನ್ಯ ರಾಜುಗೌಡರೇ ತಾವು ಹೇಳಿ.

ಶ್ರೀ ಜಿ. ರಾಜುಗೌಡ.—ಸನ್ಮಾನ್ಯ ಅಧ್ಯಕ್ಷರೇ, ಹಕ್ಕುಚ್ಯುತಿ ನಿರ್ಣಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ, ಅದು ಯಾವ ಹಂತದಲ್ಲಿದೆ ಎಂದರೆ ತಮ್ಮಿಂದ ಅನುಮತಿಯನ್ನು ಪಡೆಯಲಿಕ್ಕೆ ಪ್ರಾಥಮಿಕ ಪ್ರಸ್ತಾಪದ ಹಂತದಲ್ಲಿ ಅದನ್ನು ತಮ್ಮ ಮುಂದಿಟ್ಟಿದ್ದೇವೆ. ತಾವು ನಮ್ಮ ವಾದಗಳನ್ನು ಕೇಳಿದ್ದೀರಿ. ಈ ಹಕ್ಕುಚ್ಯುತಿ ನಿರ್ಣಯದಲ್ಲಿ ಹುರುಳು ಇದೆಯೋ ಇಲ್ಲವೋ ಅದು ಪೂರೈಸೋ ಅಲ್ಲವೋ ಎಂದು ತಮ್ಮ ನಿರ್ಣಯವನ್ನು ಹೇಳಬೇಕಾಗುತ್ತದೆ. ನಾವು ಏನು ಆಪಾದನೆಯನ್ನು ಮಾಡಿದ್ದೇವೆ, ಯಾರು ಆಪಾದಿತರು ಇದ್ದಾರೆ ಅವರು ಈ ಮನೆಗೆ ಬಂದು ತಮ್ಮ ಒಂದು ವಾದವನ್ನು ಅವರು ಮಂಡಿಸಬೇಕು. ಇದರಲ್ಲಿ ಹುರುಳು ಇದೆಯೋ ಇಲ್ಲವೋ, ಎನ್ನತಕ್ಕಂಥದ್ದು ತಮ್ಮ ಗಮನಕ್ಕೆ ಬಂದು ತಾವು ಅಂಗೀಕಾರ ಕೊಡತಕ್ಕಂಥದ್ದು ಅಥವಾ ನಿರಾಕರಿಸತಕ್ಕಂಥದ್ದು ಬೇರೆ ಕೆಲಸ ಈಗಾಗಲೇ ನನ್ನ ವಾದವನ್ನು ಮಂಡನೆ ಮಾಡಿದ್ದೇವೆ, ಅದರಲ್ಲಿ ಸರಿ ಉಂಟೋ ಅಲ್ಲವೋ

ಎನ್ನತಕ್ಕಂಥ ಪ್ರಸ್ತಾವನೆಗೆ ಒಂದು ಅವಕಾಶವನ್ನು ಕೊಡಬೇಕು. ಯಾರು ಆಪಾದಿತರು ಆಗಿದ್ದಾರೆ, ಈ ಬಗ್ಗೆ ಅವರಿಗೆ ಒಂದು ಅವಕಾಶವನ್ನು ಕೊಡಬೇಕು, ಅವರಿಂದ ಮಾಹಿತಿಯನ್ನು ಪಡೆದು ಅದನ್ನು ಕೇಳಿ ಎರಡೂ ಕಡೆ ಆಲಿಸಿದ ಮೇಲೆ ಅಂಗೀಕಾರವನ್ನು ಕೊಡತಕ್ಕಂಥದ್ದು ಅಥವಾ ನಿರಾಕರಿಸತಕ್ಕಂಥದ್ದು ಇಲ್ಲ ಅನುಮತಿಯನ್ನು ಕೊಡತಕ್ಕದ್ದು ಅದು ತಮಗೆ ಸೇರಿದ್ದು. ಆದರೆ ಈ ಹಂತದಲ್ಲಿ ಇದನ್ನು ನಿರಾಕರಿಸುವುದಕ್ಕಾಗುವುದಿಲ್ಲ. ಅನುಮತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಏಕೆಂದರೆ ಯಾರ ಮೇಲೆ ಆಪಾದನೆಯನ್ನು ಹೊರಿಸಿದ್ದೇವೆ. ಅವರಿಗೆ ತಾವು ಅವಕಾಶವನ್ನು ಕೊಡಬೇಕು, ಅವರು ಉತ್ತರವನ್ನು ಕೊಡಬೇಕು. ಆ ರೀತಿಯಾಗಿ ಒಂದು ನಿರ್ಣಯಕ್ಕೆ ತಾವು ಬರಬಹುದೋ ಹೊರತು ಅದರ ಮೇಲೆ ಬರಲಿಕ್ಕೆ ಸಾಧ್ಯ ಇಲ್ಲ. ದಯವಿಟ್ಟು ತಾವು ಯೋಚನೆಯನ್ನು ಮಾಡಿ ಯಾರ ಮೇಲೆ ನಾವು ಆಪಾದನೆಯನ್ನು ಮಾಡಿದ್ದೇವೆ, ಅವರನ್ನು ಕರೆಸಿ ಅವರಿಂದ ಸಮಂಜಾಯಿಷಿಯನ್ನು ಪಡೆದು ಅದು ಸರಿಯೋ ಅಲ್ಲವೋ ಎಂದು ಒಂದು ನಿರ್ಣಯಕ್ಕೆ ಬರುವುದು ಅದು ತಮಗೆ ಬಿಟ್ಟಿರತಕ್ಕಂಥದ್ದು. ಅದರ ಬಗ್ಗೆ ಅಂಗೀಕಾರವನ್ನು ಕೊಡತಕ್ಕಂಥದ್ದು ಅದು ತಮಗೆ ಸೇರಿದ್ದು ಅವರು ಬಾರದೇ ಈ ಮನೆಯಲ್ಲಿ ಹೇಳಿಕೆಯನ್ನು ಕೊಡದೇ ತಾವು ನಿರ್ಣಯವನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ತಾವು ಅನುಮತಿಯನ್ನು ಕೊಡಲಿಕ್ಕೂ ಸಹಾ ಸಾಧ್ಯವಿಲ್ಲ. ನಾವು ಯಾರ ಮೇಲೆ ಆಪಾದನೆಯನ್ನು ಮಾಡಿದ್ದೇವೆ, ಅವರನ್ನು ಕರೆಯಿಸಿ ಅವರಿಗೂ ಒಂದು ಅವಕಾಶವನ್ನು ಕೊಡಬೇಕು. ಇದರ ಬಗ್ಗೆ ಸರಿಯಾಗಿ ತಿಳಿದುಕೊಂಡು ಒಂದು ತೀರ್ಮಾನವನ್ನು ಕೊಡಬೇಕೆಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಚಿನ್ನಪ್ಪನವರೇ ತಾವು ಏನು ಹೇಳಬೇಕು ಎಂದು ಇದ್ದೀರೋ ಅದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು.—ಇದು ಬಹಳ ಮುಖ್ಯವಾದದ್ದು ಎಂದು ನಾನು ಅನ್ನುತ್ತೇನೆ.

ಶ್ರೀ ಯು. ಭೂಪತಿ.— ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ತಾವು ರೂಲಿಂಗ್‌ನ್ನು ಕೊಡಿ, ಬಹಳ ಹೊತ್ತು ಚರ್ಚೆಯಾಗಿದೆ. ಹೌಸ್‌ನ್ನು ಅಡ್‌ಜರ್ನ್ ಮಾಡಬೇಕು ಎಂದು ಮಾಡಿದ್ದೀರಾ ತಾವು ರೂಲಿಂಗನ್ನು ಕೊಡಿ.

ಅಧ್ಯಕ್ಷರು.—ಕೊಡುತ್ತೇನೆ.

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ.—ಜನತಾ ಪಕ್ಷದ ಸರ್ಕಾರಕ್ಕೆ ಎಕ್ಸ್-ಚೀಫ್ ಮಿನಿಸ್ಟರ್ ಎಂದು ಕರೆಯುತಕ್ಕಂಥ ಧೈರ್ಯ ಇಲ್ಲ.

(ಗೊಂದಲ)

ಅಧ್ಯಕ್ಷರು.—ಧೈರ್ಯ ಅಧೈರ್ಯಕ್ಕೆ ಹೋಗಬೇಡಿ. ರೂಲ್ಸ್ ರೆಗ್ಯುಲೇಷನ್ ಮಾತ್ರ ಹೇಳಿ. ಎಲ್ಲರಿಗೂ ಧೈರ್ಯ ಇದೆ.

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ.—ನ್ಯಾಯಬದ್ಧವಾಗಿ ಅವರು ಇಲ್ಲಿ ಹಾಜರಿರಬೇಕಾದದ್ದು ಕರ್ತವ್ಯ. purposely he is evading to come here. ನನ್ನ ಅಭಿಪ್ರಾಯ ಏನು ಎಂದರೆ ಖಂಡಿತವಾಗಿ ಸರ್ಕಾರಕ್ಕೆ ಧೈರ್ಯ ಇದ್ದರೆ ಅವರನ್ನು ಕರೆಸಿ ಕೂಡಿಸಿ ಇದನ್ನು ಹಿಯರ್ ಮಾಡಬೇಕು ಎಂದು ಕೇಳಿಕೊಂಡು ಇದರ ಬಗ್ಗೆ ತಾವು ರೂಲಿಂಗನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ ತಾವು ಹೇಳಿ

SRI M.S. KRISHNAN.- I do not speak on this question at all. ಅವರು ಬರಬೇಕೇ ಬೇಡವೇ ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ.

ಅಧ್ಯಕ್ಷರು.—ರೂಲಿಂಗ್ ಕೊಡುವುದಕ್ಕೆ ಮೊದಲು ನನಗೆ ಏನಾದರೂ ಸಲಹೆ ಕೊಡುತ್ತಾರೋ ನೋಡೋಣ.

ಶ್ರೀ ಬಿ. ಲಕ್ಕಪ್ಪ.—ಈ ಸದನದಲ್ಲಿರತಕ್ಕಂಥ ಎಲ್ಲಾ ಸದಸ್ಯರನ್ನೂ ಸಹಾ ಒಂದೇ ದೃಷ್ಟಿಯಿಂದ ನೀವು ನೋಡತಕ್ಕಂಥದ್ದು ಸರಿ. ಏಕೆಂದರೆ ಯಾವುದೇ ಪ್ರಿವಿಲೇಜ್ ಮೋಷನ್ ಬಂದಾಗ ಸಾಮಾನ್ಯವಾಗಿ ಈ ಸದನದಲ್ಲಿರತಕ್ಕಂಥ ಎಲ್ಲಾ ಸದಸ್ಯರನ್ನೂ ಒಂದೇ ದೃಷ್ಟಿಯಿಂದ ನೀವು ಕಾಣಬೇಕಾಗಿರತಕ್ಕಂಥದ್ದು, ಈ ಸಂದರ್ಭದಲ್ಲಿ ತಾವು ಇದಕ್ಕೆ ಒಂದು ವಿಶೇಷ ಆದ್ಯತೆಯನ್ನು ಕೊಡತಕ್ಕಂಥ ರೀತಿಯಲ್ಲಿ ಇದರ ಬಗ್ಗೆ ಚರ್ಚೆ ನಡೆಯುತಕ್ಕಂಥದ್ದು ಇದು ಸರಿಯಲ್ಲ, ಯಾರು ತಪ್ಪು ಮಾಡಿದ್ದಾರೆ ಅದನ್ನು ಎತ್ತಿ ಪ್ರಿವಿಲೇಜ್ ಮೋಷನ್ ರೂಪದಲ್ಲಿ ಎತ್ತಿದ್ದೇವೆ. ಅದರ ಬಗ್ಗೆ ಅವರೇ ಇಲ್ಲಿ ಕೂತಿದ್ದರೆ ಉತ್ತರ ಕೊಡುವುದಕ್ಕೆ ಸರಿ ಹೋಗುತ್ತಿತ್ತು ಅವರಿಗೆ ಭಯ ಆಗುತ್ತದೆ ಎಷ್ಟೋ ವಿಚಾರಗಳನ್ನು ಮುಚ್ಚಿಡುತ್ತಾರೆ, ಅವರಿಗೆ ಹೇಳುವುದಕ್ಕೆ ಸಾಧ್ಯ ಆಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಅವರೇ ಬಂದು ಇಲ್ಲಿ ರಿಪ್ಲೈಯನ್ನು ಹೇಳಿದರೆ ಸರಿಯಾಗುತ್ತದೆ. ಅವರು ಪತ್ರಿಕೆಯಲ್ಲಿ ಒಂದು ಹೇಳುತ್ತಾರೆ. ಪತ್ರಿಕೆಯಲ್ಲಿ ಏನು ಹೇಳಿದ್ದಾರೆ ಎಂದರೆ "ಕಾಂಗ್ರೆಸ್‌ನವರಿಗೆ ಸವಾಲು" ಮತ್ತೊಂದು ಕ್ರಿಮಿನಲ್ ಆಗಲೀ, ಮತ್ತೊಂದು ಆಗಲೀ, ಈ ರೀತಿ ಹೇಳಿಕೆಯನ್ನು ಕೊಡುತ್ತಾರೆ. ಅವರಿಗೆ ಧೈರ್ಯ ಇದ್ದರೆ ಈ ಸದನದ ಮುಖಾಂತರ ಸವಾಲನ್ನು ಹಾಕುತ್ತೇನೆ, ನಾನು ಮಾಡಿರತಕ್ಕಂಥದ್ದು ಪ್ರಿವಿಲೇಜ್ ಆಗುವುದಿಲ್ಲ ಎನ್ನುತಕ್ಕಂಥದ್ದು ಇದ್ದರೆ ಬಂದು ಇಲ್ಲಿ ಕೂತುಕೊಂಡು ನಾವು ಹೇಳತಕ್ಕಂಥದ್ದನ್ನು ಕೇಳಲಿ, ಅವರು ಅದನ್ನು ಎದುರಿಸಲಿ ಎಂದು ಈ ಮೂಲಕ ನಾನು ಕೇಳಿಕೊಳ್ಳುತ್ತೇನೆ.

(*Interruption*)

SRI MALLIKARJUN M. KHARGE.--Is he above this House ?

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ. ನಾನು ಆಗಲೇ ಹೇಳಿದ್ದೇನೆ. ಬ್ರೀಚ್ ಆಫ್ ಪ್ರಿವಿಲೇಜ್ ಯಾಕೆ ತರಬೇಕು ಎನ್ನುವುದರ ಬಗ್ಗೆ ಮಾತನಾಡಿದ್ದೇನೆ. ಪ್ರಿವಿಲೇಜ್ ಇಲ್ಲವೋ ಎನ್ನುವುದರ ಬಗ್ಗೆ ಪ್ರಸ್ತಾಪ ಬಂದಿದೆ. ಮಾನ್ಯ ಮೊಯಿಲಿಯವರು ಕ್ರಿಯಾ ಲೋಪ ಮಾಡಿದಮೇಲೆ ಸ್ಕೀಮ್ ಆಫ್ ಥಿಂಗ್ಸ್ ಏನು ಬಂದಿದೆ ಅದರ ಪ್ರಕಾರ ನಡೆದುಕೊಂಡಿದ್ದರೆ ನಮಗೆ ಏನೂ ತೊಂದರೆ ಆಗುತ್ತಾ ಇರುತ್ತಿರಲಿಲ್ಲ. ಅದು ಆಗಲಿಲ್ಲ. ಆ ಮೇಲೆ ರೂಲ್ಸ್‌ಗೆ ವಿರೋಧವಾಗಿ ನಡೆದುಕೊಂಡಿಲ್ಲ, ಅವರು ಇಲ್ಲಿಗೆ ಬರಬೇಕಾಗಿಲ್ಲ ಎಂಬ ವ್ಯಾಖ್ಯಾನವನ್ನು ಮಾನ್ಯ ದೇವೇಗೌಡರು ಕೊಟ್ಟರು. ರೂಲ್ಸ್‌ಗೆ ಅನುಗುಣವಾಗಿ ನಡೆದುಕೊಳ್ಳಲಿಲ್ಲ. Even if we have to call him here. it should be within the rule of procedure and not outside the rules of procedure. It is only a question of interpretation of rules. As per the rules, we have to give the notice to the Speaker. We have given the notice with regard to the Breach of Privilege by a Member of this House. Subsequently we have given the notice in writing to the Secretary as repuired by the rules. Then the conditions of admissibility is very important which is governed by rule 192 which reads thus.

" The right to raise a vuestion of privilege shall be governed by the following condtions, namely.—

i) not more than one vuestion shall be raised at the same sitting ?

ii) the question shall be restricted to as pecific matter of recent occurrence, and

iii) the matter requires the intervention of the House.

Here there are all the three ingredients. It is only one question i. e. ' Phone tapping ' Secondly, it should be a specific matter of recent occurrence. The matter has occurred recently Jeust before the commencement of this Session. Thirdly, the matter requires the immediate intervention of the House. It requires intervention of the House because all of us feel that it is a question of affecting the rights and privileges of the Members of the House. When we are trying to complain against another Member who was the Chief Minister, naturally it requires immediate intervention by the Speaker Then the question of raising the Privilege is governed by rule 193 which reads thus.

> " The Speaker, if he gives consent under rule 190 and holds that the matter proposed to be discussed is in order, shall after the quetions and before the list of business is entered upon, call the Member concerned "

Since you have heard, the matter proposed to be discussed is in order. We have already spoken and so many other members have spoken on it. You have agreed to that. Now, I take it for granted that the matter is in order because we have already spoken. Then.

> " After the questions and before the list of business is entered upon call the member concerned, who shall rise in his place and while asking for leave to raise the question of Privilege make a short statement relevent thereto. "

the question is, we have to raise it and than we have to state. Before raising, should we not give the opportunity to the member concerned who is very much the Member of this House ? This question has been decided in the Parliament and there is a convention. What has been stated about the convention is this way,

> " Before making a complaint, a notice is given to the Member concerned as a matter of courtesy. ,,

It has been done. we have given the notice already. on the basiy of Principles of natural justice, it should be passed on to the concerned Member against whom the complaint is made. It is like the procedure we adopt in the Tribunals while making an enquirye in cases of dismissal, victimisation, etc. etc.

2-00 p.m.

Here also, it is done on the basis of recognition of great principle of natural justice. The principle of natural justice is a very important principle. We don't want to accuse unnecessarily Sri Ramakrishna Hegde in his absence. we don't want to complain about him without him. Therefore from his own point of view of

defending himself or keeping up the dignity which he has, or from the point of view of morality or values which he speaks, it is very necessary that he should be present here. ಆ ದೃಷ್ಟಿಯಿಂದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಇಲ್ಲಿಗೆ ಬರಲೇ ಬೇಕಾಗುತ್ತದೆ. ಸುಮ್ಮನೆ ಏನೋ ಛಾಲೆಂಜ್ ಮಾಡಿದ್ದಾರೆ, ಬಂದರೆ ಬರಬಹುದು, ಬಿಟ್ಟರೆ ಬಿಡಬಹುದು ಎಂದು ಹೇಳಿದರೆ, ಅದು ಸರಿಯಲ್ಲ. The principle of natural justice is a very important ingredient. when we try to give punishment to a man or when you are giving a rulling against a Member concerned. That is the interpretattion given even in Kaul and Sahkder.

> "Further, when the Member seeks to raise a question of privilege against another Member, the Speaker, as already stated. before giving consent to the raising of the matter in the House, gives an opportunity to the Member complained against, to place before the Speaker of the House such facts as may be in question."

Therefore, opportunity should be given to Mr. Ramakrishna Hegde. There is no other way. Further it is stated.

> "Any statement made by a Member outiside the House, with the Member concerned having denied it. the Speaker accepts the statement of that Member in presence, to what had appeared in the Newspapers and withholds his consent to the raising of the question of privilege."

Even to withhold the consent, the concerned Member must come here and explain in the position. A newspaper report has appeared. ಪತ್ರಿಕೆಯಲ್ಲಿ ಬಂದಿರುವುದು ಸರಿಯಲ್ಲ, ನಾನು ಆ ರೀತಿ ಹೇಳಿಯೇ ಇಲ್ಲ ಎಂದು ಅವರು ಇಲ್ಲಿಗೆ ಬಂದು ಹೇಳಬೇಕು. ಅವರು ಕೂಡ ಟೆಲಿಫೋನ್ ಟ್ಯಾಪಿಂಗ್ ಆಗಿದೆ ಎಂಬು ಒಪ್ಪಿಕೊಂಡಿದ್ದಾರೆ, ಅದು ಸರಿಯಲ್ಲ ಎಂದು ಹೇಳಿದ್ದಾರೆ. ಆದರೆ ಅದನ್ನು ಹೊರಗಡೆ ಹೇಳಬಾರದು, ಇಲ್ಲಿ ಹೇಳಬೇಕು. If it is to be considered not a matter of privilege or if it is to be considered as serious marter and if he has to absolva himself. he must come here and then only the Speaker can withhold the consent for raising the matter of breach of privilege. It is the Ruling of the Lokasabha. It is not just an interpretation or it is not a statement which we are making. It is the Ruling of the Lokasabha given on 7-5-1959 and 9-5-1959. Therefore, you have to go through the basic ruling. Even from his own point of view, he has got to be present here. It is not from our point of view. Supposing he does not come. then what is the position? In case he is not present, then the making of the complaint is deferred untill the following sitting. Therefore, you will have to defer it and then call him in the next sitting. ಆಗಲೂ ಬಂದಿದ್ದರೆ ಏನು ಮಾಡಬೇಕು? ನಾನು ಬರುವುದಿಲ್ಲ, ನಾನು ಬರಬೇಕಾಗಿಲ್ಲ, ನಾನು ಎಲ್ಲಿ ಹೇಳಬೇಕೋ ಅಲ್ಲಿ ಹೇಳುತ್ತೇನೆ ಎಂದು ಹೇಳಿದ್ದಾರೆ. ನಾನು ಬರುವುದಿಲ್ಲವೆಂದರೆ ಏನು ಅರ್ಥ? Then you will have to draw your own inference that this

person, a Member of this House, is not prepared to be heard by this House and therefore he is liable to face the punishment which the Speaker or this House has to give.

There is no alternative. If he does not come, we will have to face the music. You will have to draw an adverse inference straightaway and action has to be taken in this regard. No doubt the Member concerned has been elected to come here and to represent the grievances of the people. But whether he can come here in order to be present here to hear your complaint is the question. Supposing he choses not to come, I don't know whether it wold amount to the contempt of the Hous-. He has been given an opportunity by the Speaker to come here and explain the position. Still, if he does not come, then it is very clear, you will have to refer the matter to the Privileges Committee and action will have to be taken. If there also, he does not chose to come, then he will, have to face the music. Let us see, what happens.

SRI K. H. SRINIVAS.— If a person just does not come, it will not amount to a contempt. If a person were to say." "I need not come I don't come tr the House" then it will be a contempt.

SRI M. S. KRISHNAN.—Till now Mr. Hegde has not stated that he will not come though the Speaker has asked him, to come. But what he has stated in yesterday's Press Confernce. is the matter which cautes concern for us. What he says is "I will tell where I want to tell". When a Pressman asked him, "why don't you come to the House and explain what you want to say in the House," Mr. Hegde says "I will say where I want to say". It has come in the Press. He has stated that the House is not the forum and that he can chose any froum which he likes. The best froum would have been this House because there are people here whe respect him and who respect his words. If he says something outside this House, it is not a proper forum. Even now he should change his mind and come to this House. If he does not chost to come to this House, then you are bound to take action against him and you are bound to postpone the issue to some other day and then take a decision to refer the matter to the Privilege Committee or you are bound to take immediate decision to refer the matter to the Privilege Committee That is the only way left

ಶ್ರೀ ಹೆಚ್.ಡಿ. ದೇವೇಗೌಡ.—ಈ ರೀತಿಯಾದಂಥ ಹಕ್ಕುಚ್ಯುತಿಗೆ ಸಂಬಂಧಪಟ್ಟಂಥ ನಿರ್ಣಯದ ಬಗ್ಗೆ ಚರ್ಚೆಯಾಗುತ್ತಾ ಇರುವುದು ಬಹುಶಃ ನಮ್ಮ ಶಾಸನಸಭೆಯ ಇತಿಹಾಸದಲ್ಲಿ ಇದೇ ಪ್ರಥಮ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಬೇಕು ಎನ್ನುವುದು ನನ್ನ ಆಸೆ, ಇದಕ್ಕೆ ಮೊಟಕು ಆಗಬಾರದು. ನಾವು ಸ್ವಲ್ಪ ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡೋಣ. ಏಕೆಂದರೆ, ಮಾನ್ಯ ಬಸವಲಿಂಗಪ್ಪನವರು ಗೊತ್ತಾಗಲಿಲ್ಲ ಎಂದು ಹೇಳಿದರು, ಇದನ್ನು ಒಪ್ಪಿಕೊಳ್ಳೋಣ. ಏಕೆಂದರೆ ಇದರ ಬಗ್ಗೆ ತಿಳಿದುಕೊಳ್ಳ

ಬೇಕಾಗಿದೆ, ಬಹುಶಃ ಇಂತಹ ಘಟನೆಗಳು ಮುಂದೆ ಜರುಗದ ರೀತಿ ಐತಿಹಾಸಿಕವಾದಂಥ ರೂಲಿಂಗ್ ಕೊಡುವಂಥಾದ್ದು ತಮ್ಮ ಪಾಲಿಗೆ ಬಂದಿದೆ ಈಗ ಶ್ರೀಮಾನ್ ಕೃಷ್ಣನವರು ಹೇಳಿದರು Speaker can suo moto refer this Motion to the Provilege Committee.

MR SPEAKER.—"Notwithstanding anything contained" ಎಂದು ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ಪೀಕರ್‌ರವರಿಗೆ ಅಧಿಕಾರ ಇದೆ. ಸಪೋಸ್ ಸೂಮೊಟೋ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದಿರಿ ಎಂದು ಇಟ್ಟುಕೊಳ್ಳೋಣ. Speaker can suo moto refer this matter to the Provilege Commitee. Then the question of a Member concerned, being present in the House will not arise. If the Speaker suo moto refess the matter to the Privilege Committee then the question of the concerned Member being present in the House will not arise at all.

SRI M.S. KRISHNA—Under what circumstances the Speaker can suo moto refer, ನೀವು ಪೂರ್ತಿ ಹೇಳಿಬಿಡಿ. It is the discretion of the Speaker.

(Interruptions)

SRI B BASAVLINGAPPA.—It is the responsibility of the Speaker.

(Interruptions)

SRI H. D. DEVEGOWDA.—I have gone through. Prima facie case ಇದ್ದರೆ. I will quote rule 195 of the Rules of procedure and Conduct of Business in the Legislative Assembly.

> "Notwithstanding anything contained in these rules, the Speaker may refer any question of privilege to the Committee of Privileges for examination. investigation or report."

So, to investigate and report, the Speaker can suo moto refer the matter to the Privilege Committee under Rule 195 If he takes that decision, then the question of the Member concerned being present in the House, will not arise at all

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೋಗಲಿ ಅದನ್ನಾದರೂ ಮಾಡಿಸಿ.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ ಅದನ್ನಾದರೂ ಮಾಡಿಸಿ ಎನ್ನುವುದು ಸರಿಯಲ್ಲ. ನಾನು ಎಲ್ಲರ ಅಭಿಪ್ರಾಯ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್ ಅಂದರೆ ಮನವೊಲಿಸಿ ಮಾಡಿಸಿ ಎಂದು.

ಅಧ್ಯಕ್ಷರು.—ನಾನು ನಿಮ್ಮನ್ನು, ಅವರನ್ನೂ ಕರೆಯುತ್ತೇನೆ. ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಎಲ್ಲಾ ಓದಿ ಎಲ್ಲರ ಅಭಿಪ್ರಾಯ ತೆಗೆದುಕೊಂಡು ತೀರ್ಮಾನ ಕೊಡುತ್ತೇವೆ.

SRI H. D. DEVEGOWDA.—It will be an historic ruling.

ಶ್ರೀ ಕೆ. ಬಿ. ಶಾಣಪ್ಪ.—ಇಲ್ಲಿಯವರೆಗೂ ಕೌಲ್ ಅಂಡ್ ಶಕ್ದರ್‌ದು ಕರೆಕ್ಟ್ ಎಂದು ಹೇಳಿದಿರಿ ಈಗ ಹೇಳುವುದಕ್ಕೆ ತಯಾರಿಲ್ಲವಲ್ಲಾ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಶಾಣಪ್ಪನವರೇ ಪ್ರಿವಿಲೇಜ್ ಮೋಷನ್‌ನನ್ನು ನಾನು ಓದುತ್ತೇನೆ. ಇದು ಒಬ್ಬ ಇಂಡಿವಿಜುವಲ್ ಮೆಂಬರ್ ಮೇಲೆ ಕೊಟ್ಟಿಲ್ಲ. ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಓದಿದಾಗ ಒಬ್ಬ ಮೆಂಬರ್ ಏನಾದರೂ ತಪ್ಪು ಮಾಡಿದಂಥ ಸನ್ನಿವೇಶದಲ್ಲಿ ಹಕ್ಕುಚ್ಯುತಿಗೆ ಎಡೆಗೊಟ್ಟಂಥ ಕ್ರಿಯಾಲೋಪವಾದಂಥ ಸನ್ನಿವೇಶದಲ್ಲಿ ಇದನ್ನು ವಿಶ್ಲೇಷಣೆ ಮಾಡಿದ್ದಾರೆ. ಇಲ್ಲಿ ಈ ನೋಟೀಸ್ ಇರತಕ್ಕದ್ದು ಮೆಂಬರ್ ವಿರುದ್ಧ ಅಲ್ಲ. ಸ್ವಲ್ಪ ಸಮಾಧಾನವಾಗಿ ಕೇಳಿ ಸ್ವಾಮಿ, ನೀವು ಬರೆದಿರುವುದನ್ನೇ ಓದುತ್ತೇನೆ. I am coming to the point.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ೨೭ನೇ ಜುಲೈಗೆ ಹೇಳಿದ್ದೀರಿ, ಈಗೇನು ಹೊಸದಾಗಿ ಹೇಳಬೇಕಲ್ಲ. "C. M. is not behind tapping"

SRI H. D. DEVEGOWDA.—'Phone tapping episode of Karnataka against the then Chief Minister". So it is not against a member. It is against the Chief Minister i.e., the Head of the Government. So the point now which is under discussion is against the member if he has committed any breach of privilege. Then when such an issue is going to be discussed...

SRI B. BASAVALINGAPPA.—So is he not a member

SRI H. D. DEVEGOWDA.—He is a member of the House. That is a different issue. When the act was committed, in what capacity was it commited?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.--ಮಾನ್ಯ ಶ್ರೀನಿವಾಸ್ ಅವರೇ, ನಿಮಗೆ ಆಮೇಲೆ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಸದಸ್ಯರಾಗಿ ಮಾಡಿದ್ದಾರೆಯೋ ಎಂದು ಯಾರು ಹೇಳಲಿಕ್ಕೆ ಸಿದ್ಧವಿಲ್ಲ ಮುಖ್ಯಮಂತ್ರಿ ಆಗಿ ಮಾಡಿದ್ದಾರೆಂದು ಒಂದು ಆಪಾದನೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಕೊಟ್ಟಿರುವುದನ್ನು ಓದಿದರೆ, ನಿಮಗೆ ಅರ್ಥವಾಗುತ್ತದೆ. ಸದಸ್ಯರ ಹಕ್ಕಿಗೆ ಚ್ಯುತಿ ಮಾಡಿದ್ದಾರೆಂದು ಸ್ಪೆಸಿಫಿಕ್ ಆಗಿ ಹಾಕಿದ್ದಾರೆ. ಇದು ಸ್ಪಷ್ಟವಾಗಿದೆ ಆದ್ದರಿಂದ ಈ ವಿಷಯದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಸದಸ್ಯರ ಹಕ್ಕಿಗೆ ಚ್ಯುತಿ ಉಂಟು ಮಾಡಿರುವುದಲ್ಲದೆ, ಈ ಮನೆಯ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಉಂಟು ಮಾಡಿದ್ದಾರೆ. Specifically addressed to the hon Member Mr Ramakrishna Hegde.

SRI H. D. DEVEGOWDA.—Even granting that it is a specific noting. ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರು ಸ್ಪೆಸಿಫಿಕ್ ಆಗಿ ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ವಿರೋಧ ಪಕ್ಷದ ನಾಯಕಿಯವರು ಕೊಟ್ಟಿರುವ ನೋಟೀಸಿನಲ್ಲಿ ಇದ್ದರೂ, ಮಾನ್ಯ ರಾಮಕೃಷ್ಣ ಹೆಗಡೆಯವರು ಸದಸ್ಯರಾಗಿ ಮಾಡಿದ್ದಾರೆಂಬ ಆರೋಪ ಎಲ್ಲಿಯೂ ಇಲ್ಲ. ಮುಖ್ಯಮಂತ್ರಿಗಳಾಗಿದ್ದಂತ ಕಾಲದಲ್ಲಿ ಈ ಘಟನೆ ಆಗಿದೆ. ಹೀಗಿರುವಾಗ ಆರೋಪ ಮಾಡುವುದು ಹೇಗೆ ಸಾಧ್ಯ ? ಆರ್ಡರ್ ಮಾಡಬೇಕಾದರೆ, ಇಲ್ಲಿ ಕೂತಿರುವ ಸದಸ್ಯರು ಆರ್ಡರ್ ಮಾಡುವುದಕ್ಕಾಗುವುದಿಲ್ಲ. ಫೋನ್ ಟ್ಯಾಪಿಂಗ್‌ನಲ್ಲಿ ಮುಖ್ಯಮಂತ್ರಿಗಳಾಗಿ, ಈ ಸದನದಲ್ಲಿ ಹಕ್ಕು ಚ್ಯುತಿಗೆ ಕಾರಣರಾಗಿದ್ದಾರೆಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕೋಳಿ ಮೊದಲೋ ಮೊಟ್ಟೆ ಮೊದಲೋ ಎನ್ನುವ ಲೆಕ್ಕಾಚಾರವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನನ್ನ ಒಂದು ಅಭಿಪ್ರಾಯದಲ್ಲಿ ಈಗ ಮುಖ್ಯ ಮಂತ್ರಿಗಳು ಮಾಡಿದ್ದಾರೋ ? ಅಧಿಕಾರಿಗಳು ಕರ್ತವ್ಯ ಲೋಪ ಮಾಡಿದ್ದಾರೋ ಅಥವಾ ಅಧಿಕಾರಿಗಳು ಅವರ ಕರ್ತವ್ಯಕ್ಕಿಂತ ಮುಂದೆ ಹೋಗಿ ಹಕ್ಕುಚ್ಯುತಿ ನಿರ್ಣಯ ಮಾಡಿದ್ದಾರೋ ಎನ್ನುವುದರ ಬಗ್ಗೆ ತನಿಖೆ

ಆಗಬೇಕು. ಅವರು ಮಾಡಿದ್ದಾರೋ, ಇವರು ಮಾಡಿದ್ದಾರೋ ಎಂದು ಹೇಳುವುದು ಕಷ್ಟ. ಮುಖ್ಯ ಮಂತ್ರಿಗಳಾಗಿ ಮಾಡಿದ್ದಾರೆ. ಅವರು ಇಲ್ಲಿ ಇರಲೇಬೇಕು ಅವರು ಅಕ್ಯೂಸ್ಡ್ ಪ್ರಾಸಿಕ್ಯೂಟ್ ಮಾಡಬೇಕೆಂದು ಹೇಳುವುದು ಸಮಂಜಸವಾಗಲಾರದು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಶ್ರೀ ದೇವೇಗೌಡರು ತಂದಿರತಕ್ಕ disti guishing arguments ಸಮಂಜಸವಾದಂತಹ ವಾದವಲ್ಲ. ಅವರ ಮೇಲೆ ಇರತಕ್ಕ ಕಂಪ್ಲೇಂಟ್, ಅವರು ಯಾವ ಕ್ಯಾಪಾಸಿಟಿಯಲ್ಲಿ ಮಾಡಿದ್ರೋ ಬಿಟ್ರೋ. It is not just relevant "If the man who is implicated in the complaint is a member of the House" is the word used in the Rules and also in Kaul and Shakdhar. ಇಲ್ಲಿ ಪ್ರಶ್ನೆ ಏನೆಂದರೆ, ಬೇರೆ ಬೇರೆ ಕೆಪಾಸಿಟಿ ಈ ಮನೆಯಲ್ಲಿರತಕ್ಕಂಥ ಸದಸ್ಯರುಗಳಿಗೆ ಇರಬಹುದು. ಈಗ ಮಂತ್ರಿಗಳು ಇರುತ್ತಾರೆ, ಮಿನಿಸ್ಟರ್ ಆಫ್ ಸ್ಟೇಟ್ ಇರುತ್ತಾರೆ, ವಿಪ್ ಇರುತ್ತಾರೆ......

ಶ್ರೀ ಯಂ. ಭೂಪತಿ.—ಅವರು ಮುಖ್ಯ ಮಂತ್ರಿಗಳಾಗಿ ಮಾಡುವಾಗ ಶ್ರೀ ರಾಮಕೃಷ್ಣ ಹೆಗಡೆಯವರು ಈ ಮನೆಯ ಸದಸ್ಯರು ಕೂಡ ಆಗಿರಲಿಲ್ಲ, ಅದಕ್ಕೆ ಅವರು ಮೋಸ್ಟ್ಲಿ ಆ ವಾದವನ್ನು ಮಾಡಿರಬೇಕು ಎಂದು ಕಾಣಿಸುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವೊತ್ತು ಆಗಿಲ್ಲದೇ ಇದ್ದರು ಪರವಾಯಿಲ್ಲ, ಇವೊತ್ತು ಅವರು ಈ ಮನೆಯ ಸದಸ್ಯರು ಹೌದೋ ಅಲ್ಲವೋ, ಅಷ್ಟೇ ಇಲ್ಲಿ ರೆಲಿವೆಂಟ್ ಆಗತಕ್ಕದ್ದು. ಅವರು ಯಾವ ಕೆಪಾಸಿಟಿಯಿಂದ ಇಲ್ಲಿ ಮಾಡಿದರು. ತಮಗೆ ಗೊತ್ತಿದೆ ಕೆಲವೊಂದು ಸಂದರ್ಭದಲ್ಲಿ ಬಿಟ್ಟರೆ ಈ ಮನೆಯ ಹಕ್ಕು ಭಾದ್ಯತೆಗಳ ಬಗ್ಗೆ ಅಥವಾ ಬೇರೆ ಬೇರೆಯವರ ಕರ್ತವ್ಯಗಳ ಬಗ್ಗೆ ಅಥವಾ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಯಾವುದು ಇರಬೇಕೆಂದು ಹೇಳಬೇಕಾದರೆ ಸಾಧಾರಣವಾಗಿ ಸದಸ್ಯರು ಎಂದು ಶಬ್ದ ಪ್ರಯೋಗ ಇದೆಯೇ ಹೊರತು ರೂಲ್ಸ್‌ನಲ್ಲಿ ಮುಖ್ಯ ಮಂತ್ರಿಗಳಿಗೆ ಒಂದು ಸೆಟ್ ಆಫ್ ರೂಲ್ಸ್, ಸದಸ್ಯರಿಗೆ ಬೇರೆ ಸೆಟ್ ಆಫ್ ರೂಲ್ಸ್ ಇಲ್ಲ. ಮಿನಿಸ್ಟರ್ ಆಫ್ ಸ್ಟೇಟ್‌ಗೆ ಒಂದು ಬೇರೆ ಸೆಟ್ ಆಫ್ ರೂಲ್ಸ್ ಇಲ್ಲ. ಇಲ್ಲಿ ಪ್ರಶ್ನೆ ಏನೆಂದರೆ, whether at this point of time the man who has come to be implicated in this complaint is a member of the House or not. This is the only relevant factor. Other foctors are not relevant. It is a matter of detail afterwards. Today we have brought a complaint against a person who is as on today, very much a member of this House. So that becomes applicable to him.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ನಮ್ಮ ಆ ಕಡೆಯ ಸದಸ್ಯರುಗಳು ಮಾಜಿ ಮುಖ್ಯ ಮಂತ್ರಿಗಳನ್ನು ಉಳಿಸಿಕೊಳ್ಳಲಿಕ್ಕೆ ಒಂದು ಸೂಕ್ಷ್ಮವಾದ ಎಳೆಯನ್ನು ಎಳೆದಾಡಿ ನೋಡಿ ಅದಕ್ಕೆ ಪ್ರಯತ್ನವನ್ನು ಪಟ್ಟಿದ್ದಾರೆ. ಈಗ ನನ್ನ ಅಭಿಪ್ರಾಯ ಇಷ್ಟೆ. ಅಧ್ಯಕ್ಷರೇ, ಈಗ ಗೀತೆಯನ್ನು ಇಂಟರ್‌ಪ್ರಿಟೇಷನ್ ಮಾಡುತ್ತಾ ಹೋದರೆ, ಎಷ್ಟೋ ಅಧ್ಯಾಯಗಳನ್ನು ಕೂಡ ಬರೆಯಬಹುದು. ಅಥವಾ ಎರಡೇ ಪದಗಳಲ್ಲಿ ಹೇಳಿ ಅಂದರೆ ತ್ಯಾಗಿ ಆಗು ಎಂದು ಅದರ ಸಾರಾಂಶವನ್ನು ಹೇಳಬಹುದು. ಬಹಳಷ್ಟು ಕಾನೂನು ಪುಸ್ತಕಗಳನ್ನು, ಅದನ್ನು, ಇದನ್ನು ಇಂಟರ್‌ಪ್ರಿಟೇಷನ್ ಮಾಡುವುದು, ತಮ್ಮ ವಾದಗಳನ್ನು, ಸಮರ್ಥನೆಗಳನ್ನು, ಜಾಣ್ಮೆಯಿಂದ ಯುಕ್ತವಾದವನ್ನಾಗಿ ಮಾರ್ಪಡಿಸುವುದು, ಅದನ್ನು ಸಭೆಯಲ್ಲಿಡುವುದು ಕೂಡ ಒಂದು. ಅದು ಚರ್ಚೆ ನಡೆದುಹೋಯಿತು. ಈಗ ನಾನು ಎರಡನೆಯ ಪ್ರಶ್ನೆಯನ್ನು ಕೇಳುತ್ತೇನೆ. ಒಂದು ನಮ್ಮ ಮಾನ್ಯ ಬೊಮ್ಮಾಯಿಯವರಿಗೆ ಸಂಬಂಧಪಟ್ಟಿದ್ದು. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಸಭೆಯಲ್ಲಿ ಈ ಅಡ್ಜರ್ನ್‌ಮೆಂಟ್ ಮೋಷನ್ ಏನಿದೆ, ಇದರ ಬಗ್ಗೆ ಮಾತನಾಡುತ್ತಾ ಮಾಜಿ ಮುಖ್ಯ ಮಂತ್ರಿಗಳಾದ ಮಾನ್ಯ ರಾಮಕೃಷ್ಣ ಹೆಗಡೆಯವರು ಸಭೆಯಲ್ಲಿ ಹಾಜರಿರುವಂಥ ಸಂದರ್ಭದಲ್ಲಿ ಚರ್ಚೆ ನಡೆಸೋಣ, ಅವರು ನಾಳೆ ಬರತಕ್ಕ ಸಂದರ್ಭ ಇದೆ, ಅವರು ಸಭೆಯಲ್ಲಿ ಬಂದಾಗ ಚರ್ಚೆ ಮಾಡೋಣ ಎಂದು ಹೇಳಿದರು. ಅವರು ಆ ಒಂದು ಮಾತಿನಿಂದ, ಆ ಒಂದು ವಾದದಿಂದ ಏತಕ್ಕೆ ಹಿಂಜರಿದಿದ್ದಾರೆ ಎನ್ನುವುದು ಒಂದು ಪ್ರಶ್ನೆ. ಇನ್ನು ಎರಡನೆಯ ಪಶ್ನೆ ಅಂದರೆ, ನಮ್ಮ ಮಾನ್ಯ ರಾಮಕೃಷ್ಣ ಹೆಗಡೆಯವರು ಪತ್ರಿಕೆಗಳಲ್ಲಿ ಒಂದು ಮಾತನ್ನು ಹೇಳಿದ್ದಾರೆ. ನಾನು ಇದ್ದಿದ್ದರೆ ಎನ್ನುವ ಮಾತನ್ನು ಹೇಳಿದ್ದಾರೆ. ನೀವು ಏತಕ್ಕೆ ಇರಲಿಲ್ಲ ಎಂದು ಪತ್ರಿಕೆಗಳವರು ಕೇಳಿದಾಗ ನಾನು ಇದ್ದಿದ್ದರೆ ಅವರು ಮುಕ್ತವಾಗಿ ಚರ್ಚೆಯನ್ನು ಮಾಡುತ್ತಾ ಇರಲಿಲ್ಲ ಎಂದು ಹೇ

ದ್ದಾರೆ. ಇವರೇನಾದರೂ ಹಂಲಿ ಕಟ್ಟಿದ್ದಾರೆ, ಇವರ ಹತ್ತಿರ ಜಾದು ಇದೆಯಾ, ನಮ್ಮನ್ನು ಮೋಡಿ ಮಾಡತಕ್ಕಂತಹುದ್ದು ಏನಾದರೂ ಇದೆಯೋ ನಾವೂ ಸ್ವಲ್ಪ ನೋಡುತ್ತಿದ್ದೆವು. ಅಧ್ಯಕ್ಷರೇ, ಇಲ್ಲಿರತಕ್ಕ ಪ್ರಶ್ನೆ ಇಷ್ಟೆ ಯಾವ ಮೌಲ್ಯಾಧಾರದ ರಾಜಕಾರಣದ ತುತ್ತೂರಿಯನ್ನು ಹೆಗಡೆಯವರು ದೇಶಾದ್ಯಂತ ಊದಿದ್ದಾರೆ, ಅವಕ್ಕೆ ಈ ಮನುಷ್ಯ ಬದ್ಧರಾಗಿದ್ದಾರೆಯೋ ? ನೈತಿಕತೆಯ ಬಗ್ಗೆ ಗಂಟೆಗಟ್ಟಲೆ ಭಾಷಣ ಮಾಡತಕ್ಕವರು, ಪುಟಗಟ್ಟಲೆ ಪುಸ್ತಕ ಪ್ರಿಂಟ್ ಮಾಡಿ ಹಂಚತಕ್ಕಂತಹ ಈ ವ್ಯಕ್ತಿಗೆ ಈ ಸದನವನ್ನು ಎದುರಿಸಲಿಕ್ಕೆ ಬೇಕಾಗಿರತಕ್ಕಂಥ ನೈತಿಕತೆ ಶಕ್ತಿ ಏತಕ್ಕೆ ಇಲ್ಲ ? ಅಪರಾಧಿ ಪ್ರಜ್ಞೆ ಇವರನ್ನು ಸಂಪೂರ್ಣವಾಗಿ ಪಾತಾಳಕ್ಕೆ ತಳ್ಳಿದೆಯೇ, ಇದು ನಮ್ಮ ಮುಂದಿರುವ ಪಶ್ನೆ. ಅಣಕ್ಕೋಸ್ಕರ ನೀವು ವೈಶಂಪಾಯನ ಸರೋವರದಲ್ಲಿ ಏತಕ್ಕೆ ಅವರನ್ನು ಮುಚ್ಚಿಟ್ಟಿದ್ದೀರಿ ? ಅವರನ್ನು ಹೊರಗೆ ಕರೆದುಕೊಂಡುಬನ್ನಿ. ದುರ್ಯೋಧನರು ಹೀಗೆ ಆಗಿದ್ದು, ಅಪರಾಧಿ ಪ್ರಶ್ನೆ ಯಾವಾಗ ಬಂತು, ಆಗ ವೈಶಂಪಾಯ ಸರೋವರಕ್ಕೆ ಹೋಗಿ ಹೊಕ್ಕಿಕೊಂಡ್ರು, ಈಗ ತಾವು ಅವರನ್ನು ಹೊರಗೆ ಕರೆಸಿ, ಮುಕ್ತವಾಗಿ ಚರ್ಚೆ ಮಾಡೋಣ. ನಾವು ಅವರನ್ನೇನೂ ತಿಂದು ಹಾಕುವುದಿಲ್ಲ, ಹಾಗೆಯೇ ಅವರು ನಮ್ಮನ್ನು ಏನೋ ಮಾಡುವ ಸಂದರ್ಭ ಇಲ್ಲ. ಅವರನ್ನು ಕರೆಸಿದರೆ, ಆಗ ಚರ್ಚೆಗೆ ಒಂದು ನೈತಿಕ ಮಟ್ಟ ಬರುತ್ತದೆ, ರಾಜಕೀಯ ಮೌಲ್ಯದ ನಿಮ್ಮ ತುತ್ತೂರಿಗೆ ಬೆಲೆ ಬರುತ್ತದೆ ಹಾಗೆಯೇ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಆಡಿರತಕ್ಕಂಥ ಮಾತಿಗೂ ಕೂಡ ಬೆಲೆ ಬರುತ್ತದೆ.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆಯವರು ಪತ್ರಿಕೆಗೆ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅದೇನೆಂದರೆ, ಕಾಂಗ್ರೆಸ್‌ನವರು ಧೈರ್ಯವಿದ್ದರೆ ಕೇಸನ್ನು ಹಾಕಲಿ ಅಂತ. ನಾನಾದರೂ ಹೇಳುತ್ತೇನೆ, ಅವರಿಗೆ ಧೈರ್ಯವಿದ್ದರೆ ಈ ಹೌಸ್‌ಗೆ ಬಂದು ಫೇಸ್ ಮಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಭೂಪತಿಯವರು ಕ್ಷಮಿಸಬೇಕು, ಅವರು ಭಾಷಣ ಮಾಡುವಾಗ ಒಂದು ಪ್ರಶ್ನೆಯನ್ನೆತ್ತಿ ಆತಂಕವಾಯಿತು. ಆದರೆ ಈ ಮನೆಯ ಹಿರಿಯ ಸದಸ್ಯರು ಮತ್ತು ಸಚಿವರಾದ ಶ್ರೀ ದೇವೇಗೌಡರು ಹೇಳಿದಂತೆ ಇದೊಂದು ಐತಿಹಾಸಿಕ ನಿರ್ಣಯವನ್ನು ಕೊಡಬೇಕಾದಂಥ ಪ್ರಥಮ ಕರ್ತವ್ಯ ತಮ್ಮ ಪಾಲಿಗೆ ಇವತ್ತು ಬಂದಿದೆ. ಆದ್ದರಿಂದ ನಾವು ಇದನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಇಂಥ ಕೆಲವು ಐತಿಹಾಸಿಕ ಸಂದರ್ಭಗಳು ಮತ್ತು ಸಂಸತ್ತಿನ ಅಥವಾ ವಿಧಾನ ಸಭೆಯ ಸತ್ಪರಂಪರೆಗಳನ್ನು ಎತ್ತಿ ಹಿಡಿಯುವುದರಲ್ಲಿ ತಾವು ಯಾವಾಗಲೂ ಕೂಡ ಹಿಂದುಮುಂದು ನೋಡುವುದಿಲ್ಲವೆಂಬ ವಿಶ್ವಾಸವನ್ನು ನಾವು ಹೊಂದಿದ್ದೇವೆ. ಮಾನ್ಯ ಸದಸ್ಯರಾದ ಪಟಮಕ್ಕಿ ರತ್ನಾಕರ್‌ರವರು ಬಹಳ ಪ್ರಮುಖವಾದ ಒಂದು ವಿಚಾರವನ್ನು ಇಲ್ಲಿ ಎತ್ತಿದ್ದಾರೆ. ಈ ವಿಚಾರ ಪ್ರಿವಿಲೇಜ್ ಮೋಷನ್ ಅಲ್ಲದಿದ್ದರೂ ಕೂಡ ಈ ವಿಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಿದ್ದರೆ ಬಹಳ ಒಳ್ಳೆಯದಾಗಿತ್ತು. ಈ ದಿವಸ ಇದು ಆಗಬೇಕೆಂದು ಅವರು ಏನು ಹೇಳಿದರು ಆ ಮಾತು ಕೇವಲ ತಾಂತ್ರಿಕವಾಗಿ ಹೇಳಿದಂಥ ಮಾತು ಎಂದು ನಾನು ಒಪ್ಪುವುದಿಲ್ಲ. ಏಕೆಂದರೆ ಅವರ ಮಾತು, ಅವರು ಬೆಳೆದುಬಂದ ಪಾರ್ಲಿಮೆಂಟರಿ ಪರಂಪರೆ He has been bread with that development. ಈ ಕೆಲವು ಪರಂಪರೆ, ಸತ್ಪರಂಪರೆಯಲ್ಲಿ ತಾವು ಬೆಳೆದುಬಂದ ವಾತಾವರಣದಿಂದ ಈ ಮಾತನ್ನು ಹೇಳಿದ್ದೀರೆಂದು ನಾನು ನಂಬಿದ್ದೇನೆ. ಈ ದಿವಸ ನನಗೆ ಬಹಳ ಆಶ್ಚರ್ಯವಾಯಿತು. ತಾವು ಹೇಳಿದ ಮಾತು ತಮ್ಮ ಹೃದಯಾಂತರಾಳದಿಂದ ಬಂದ ಮಾತಲ್ಲ. ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿರತಕ್ಕದ್ದನ್ನು ನಾವು ಏತಕ್ಕೆ ಫಾಲೋ ಮಾಡಬೇಕೆಂದು,......

SRI S. R BOMMAI.—I have got great respect for that book. It is not a gospel truth, or a final truth. ನಮ್ಮ ಭಾಷೆಯಲ್ಲಿ ನಾವು ಹೇಳಿದ್ದೇವೆ. ನೀವು ಏನು ಬೇಕಾದರೂ ಹೇಳಿಕೊಳ್ಳಿ. ಇದು ಬೈಬಲ್ ಎಂದು ತಾವು ಹೇಳಿದಿರಿ. ಆದರೆ ಇದು ಅಲ್ಲ ಎಂದು ನಾನು ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಗೀತೆಯಲ್ಲಿ ಅನೇಕ ಅಧ್ಯಾಯಗಳು, ಪ್ರಾಕಾರಗಳೂ ಬರುತ್ತವೆ. ಇಲ್ಲದಿದ್ದರೆ ಗೀತೆಯಲ್ಲಿರತಕ್ಕ ಕೆಲವು ಅಧ್ಯಾಯಗಳು ವೇದಗಳಿಗೆ ಸರಿಯಾಗಿಲ್ಲವೆಂದು ಉಳಿದ ಅಂಶಗಳನ್ನು ಯಾರೂ ಕಿತ್ತು ಹಾಕುವುದಿಲ್ಲ, ಎಪಿಸೋಡ್ಸ್, ಖುರಾನ್ ಆಗಲಿ, ಬೈಬಲ್ ಆಗಲಿ, ಸೇಂಟ್ ಹೇಳಿದಂಥಾದು ಅಲ್ಲ ಎಂದು ತೆಗೆದುಹಾಕುವುದಿಲ್ಲ. Every part of it

whether it is directly said by the Prophet or directly said by saints, what is written there is sanctified. ಈ ವಿಚಾರವನ್ನು ತಾವು ಒಪ್ಪಬೇಕಾಗುತ್ತದೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಮ್ಮ ದೇಶದ ಸಂಸತ್ ಪರಂಪರೆಗಳ ಬಗ್ಗೆ ಇರತಕ್ಕ ಒಂದೇ ಒಂದು and most valuable book and the only authenticated book, which is followed by the Legislatures and Parliament in this country. It is sole and the only book, it is Kaul and Shakdhar's Parliamentary Procedure and Practice. ಇನ್ನೊಂದನ್ನು ಹುಡುಕಬೇಕೆಂದರೆ ಇನ್ನೊಂದು ಇಲ್ಲವೇ ಇಲ್ಲ. ಹೊರಗಡೆ ಹೋದರೆ May's Parliamentary practice. ಎಂದು ಇದೆ. ನಾನು ಆ ವಿಷಯಕ್ಕೆ ಬಂದಾಗ ಹೇಳುತ್ತೇನೆ ಆದರೆ ಈ ವಿಚಾರವನ್ನು ನಾನು ಸರಳವಾಗಿ ಏನೂ ಎತ್ತಿಲ್ಲ. ಬಹಳವಾಗಿ ಸಂಶೋಧನೆಯನ್ನು ಮಾಡಿಯೇ ಈ ವಿಷಯವನ್ನು ಎತ್ತಿದ್ದೇನೆ. ಇವತ್ತು ಇದರಲ್ಲಿ ಒಂದು ಚಾಪ್ಟರೇ ಇದೆ. ಇದರಲ್ಲಿ ಬಹಳ ಅರ್ಥವಿದೆ. ಏತಕ್ಕೆಂದರೆ ಸನ್ಮಾನ್ಯ ಸದಸ್ಯರು ಯಾರಿಗೆ ಅದು ಸಂಬಂಧಪಟ್ಟಿದೆ ಅವರ ಹಕ್ಕನ್ನು ಸಂರಕ್ಷಣೆ ಮಾಡುವುದೇ ಮುಖ್ಯವಲ್ಲ. Let us not be mistaken. ಏತಕ್ಕೆಂದರೆ ಇದು ಅವರಿಗೆ ಬೇಡ ಎಂದು ಹೇಳುವಾಗ ನೀವು ಏತಕ್ಕೆ ಒತ್ತಾಯ ಮಾಡುತ್ತೀರೆಂದು ಹೇಳತಕ್ಕಂಥ ಅಭಿಪ್ರಾಯವಿಲ್ಲ. ಈ ಪ್ರಿವಿಲೇಜ್ ಮೋಷನ್‌ಗೆ ನೋಟೀಸ್ ಮಾಡತಕ್ಕಂಥದ್ದು. As a matter of courtesy ; It is not only that. It is a policy, a code of conduct which is prescribed to this House. ಅದು ಇದೆ, ನಾವು ಎಲ್ಲಾ ಎಲೆಕ್ಟ್ ಆಗಿ ಬಂದಿದ್ದು ಈ ರಾಜ್ಯದ ಕಾನೂನನ್ನು ರಚಿಸಲು ಮತ್ತು ನಮ್ಮ ಕ್ಷೇತ್ರದ ವಿಚಾರಗಳನ್ನು ಈ ಸದನದ ಮೂಲಕ ಪ್ರಮುಖವಾಗಿ ಚರ್ಚೆ ಮಾಡುತ್ತೇವೆ. ಇದಕ್ಕೆ ಸಬ್‌ಸ್ಟ್ಯೂಟ್ ಇಲ್ಲ. We are elected for this House ಹಾಗೆ ಇರುವಾಗ ಆಯಾ ಸದಸ್ಯರ ವಿಚಾರ ಅವರಿಗೆ ನ್ಯಾಚುರಲಿ Principles of natural Justice. ಅವಕಾಶ ಕೊಡುವುದೇ ಮುಖ್ಯವಲ್ಲ. When a complaint comes about privilege, it concerns the privilege of this House. Incidentally privilege of a member is privilege of the whole House. ಏತಕ್ಕೆಂದರೆ ಈ ಸದನಕ್ಕೆ ಪ್ರಿವಿಲೇಜ್ ಇದೆ. ಹಕ್ಕಿನ ಸಮುಚ್ಚಯವಿದೆ. ಆ ಸಮುಚ್ಚಯದ ಲಾಭದಿಂದ ವೈಯಕ್ತಿಕವಾಗಿ ನಾವು ಲಾಭವನ್ನು ಹಲವಾರು ಮೆಂಬರ್ಸ್ ಪಡೆದಿರಬಹುದು. ಅಂದರೆ ಇಡೀ ಒಂದು ಹಕ್ಕನ್ನು ಈ ಸದನಕ್ಕೆ ಇರತಕ್ಕಂಥ ಹಕ್ಕಿನ ಸಮುಚ್ಚಯವನ್ನು ಅದರ ತಳಹದಿಯನ್ನು ಈವತ್ತು ಬುಡಮೇಲು ಮಾಡತಕ್ಕಂಥ ಒಂದು ಪ್ರಯತ್ನ ಈ ಸದನದ ಸದಸ್ಯರು ಒಬ್ಬರು ಮಾಡಲಿಕ್ಕೆ ಹೋದರೆ ಅದಕ್ಕಿಂತ ಗಂಭೀರವಾದ ಅಪಾದನೆ ಮತ್ತೊಂದು ಇಲ್ಲ. We are part of that. ಈವತ್ತು ಬೇಲಿಯೇ ಹೊಲ ಮೇಯ್ದಂತಹ ಪ್ರಸಂಗವಾಗುವುದು ಇದೆ. It is not exactly a courtesy, only a small component of that. Major component of that part is being a Member of this House, you are trying to deprive this House of the privilege which have been endowed to this House. That is important. Member should know that. He must be aware of that. He must be conscious of this.

ಆದರೆ ಅಧ್ಯಕ್ಷರೇ ಅವರಿಗೆ ಪ್ರಿವಿಲೇಜ್ ಕೊಡಲಿಕ್ಕೆ ಅಥವಾ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಅಥವಾ ಮಾಜಿ ಮುಖ್ಯಮಂತ್ರಿಗಳನ್ನೂ ಅಲ್ಲ, ಯಾವುದೇ ಸದಸ್ಯನ್ನು ಇಲ್ಲಿ ಬಹಳ ಗಂಭೀರವಾಗಿ ಮೆರವಣಿಗೆಯಿಂದ ತಂದು ಅವರಿಗೆ ಸನ್ಮಾನ್ಯ ಮಾಡಲಿಕ್ಕೆ ಕರೆಯಿಸುವುದಲ್ಲ. Let us not take it that it is to honour we are bringing him. It is only a small component of that part of it. Once the House takes up further prelimenary discussion them he has no place here to sit He is not fit to be here ಇದರಲ್ಲಿ ಡಿಸ್‌ಕಷನ್ ಇಲ್ಲಿ ಪ್ರಾರಂಭವಾದ ಮೇಲೆ He is directed to withdraw ಏತಕ್ಕೆ, because in this sancfioned House he is

not entitled to sit because there is cloud against him ಇದು ಕ್ರಿಮಿನಲ್ ಲಾ ಅಲ್ಲ. That is the principle. Don't think guilty. he is considered to be innocent. It is on a different context altogether. ಅದಕ್ಕಾಗಿ If he is one among us. equally sanctified, because of the sanctity which is enjoyed by this houses, would have been asked to continue even during that proceedings. ಆದ್ದರಿಂದ ಇದನ್ನು ಚರ್ಚೆ ಮಾಡುವಾಗ ಏನು ಒಂದು ಅಭಿಪ್ರಾಯ ಬಂದಿದೆ ಎಂದರೆ Not it is a matter of courtesy. As a principle of natural justice ಅವರನ್ನು ಕರೆಯುತ್ತಿದ್ದೇವೆ. It is a privilege given to Member smallest particle of the whole philosophy.

೩–೩೦ ಪಿ. ಎಂ.

ಇವೆರಡೂ ಅದರಲ್ಲಿ ಅಡಕವಾಗುವುದರಿಂದ ಅಧ್ಯಕ್ಷರೇ, ಅವರು ಇಲ್ಲಿರುವುದು ಬೇಡ ಎಂದು ಹೋಗಿದ್ದಾರೆ : ಅಂದಾಗ ನಮಗೆ ಏನು ಕೆಲಸ, ತಮಗೆ ಏನು ಕೆಲಸ, ಇಷ್ಟು ಚರ್ಚೆ ಏತಕ್ಕೆ ಮಾಡಬೇಕು ? ಹಿಂದೆ ಈ ಸದನದಲ್ಲಿ ಅಥವಾ ಯಾವುದೇ ಸದನದಲ್ಲಿ ಇಂಥ ಪ್ರಶ್ನೆ ಬಾರದೆ ಇರಬಹುದು. ಆದರೆ ವಿಚಾರವನ್ನು ಈ ಪರಂಪರೆಯ ಉತ್ಕೃಷ್ಟತೆಯನ್ನು ಕಾಪಾಡಿಕೊಂಡು ಹೋಗಬೇಕಾದ ಜವಾಬ್ದಾರಿ ತಮ್ಮ ಮೇಲಿದೆ ಅಥವಾ ಎಲ್ಲರಿಗೂ ಇದೆ ಎಂಬುದನ್ನು ನಾವು ಖಂಡಿತ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ, ತಮಗೆ ಎಲ್ಲ ಗೊತ್ತಿರುವುದರಿಂದ ನಾನು ಪುನರುಚ್ಚರಿಸಬೇಕಾಗಿಲ್ಲ. There are 3 stages–190, 191 and 192.

MR. SPEAKER.—Consent rejected.

SRI M. VEERAPPA MOILY.—ಅದೆಲ್ಲಾ ನಾನು ಹೇಳುತ್ತಿಲ್ಲ. This is for the kind subjective satisfaction of the Hon. Speaker. The people who raise the privilege issue will not come to the picture up to the stage of 190, 191, and 192. ಆಗ ಪ್ರಿಲಿಮಿನರಿ ಸಬ್‌ಮಿಷನ್ ಮಾಡತಕ್ಕ ಸ್ಟೇಜಸ್ ಇಲ್ಲ.

That is the procedure, which is prescribed by the office.

> "191. A member wishing to raise a question of privil ge shall give notice in writing to the Secretary before the commencement of the sittitg on the day the question is proposed to be raised"

It is a matter or procedure i. e. , an official procedure. Nothing more than that. ಆ ಸ್ಟೇಜ್‌ನಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಇಲ್ಲ ರೈಸ್ ಮಾಡುವ ಪ್ರಶ್ನೆಯೂ ಇಲ್ಲ, Rule 192 prescribes certain restrictions for raising the issue. There are three restrictions imposed. They are ;

" (i) not more than one question shall be raised at the same sitting :

(ii) the question shall be restricted to– a specific matter of recent occurrence :

(iii) the matter requires the intervention of the House"

Now, we are at Rule 193, i, e, , Mode of raising. If we are to raise from the seat and raise this issue, what is the mode ? ಮಾನ್ಯ ಕೃಷ್ಣನ್ ಮಾತನಾಡಿದರು, ಮಾನ್ಯ ವೆಂಕಟರಾಮಯ್ಯನವರು ಮಾತನಾಡಿದರು. ಮಾನ್ಯ

ಭೂಪತಿಯವರು ಮಾತನಾಡುತ್ತಿದ್ದ ಸಂದರ್ಭದಲ್ಲಿ I found fault with the mode of raising this. I thought there is some irregularity committed, because we have not complied with certain mandatory provisions of certain conventions, certain provisions which are authenticated by the Parliamentary practice. This is a procedure prescribed But, the flesh and the content is given by the convention and the authority, because the rules, we have derived from the present practice which we follow, but also they are picked up from the authorities. After all, ತಾಯಿ ಬೇರು ಯಾವುದು ಅಂದರೆ We derive inspiration from the practice in the House of Commons, the practice in the Parliament, the practice in the Legislature. We derive all the feed back for framing the rules from that. Rules do not come from the sky all of a sudden. When there is a question of doubt, when we require certain clarification, when we require some enlightenment of the spirit on a particular rule, on a particular chapter which has been framed, we are bound to go back to some of these authorities on the conventions. ಇದನ್ನು ಬಿಟ್ಟು ಮಾಡಿದರೆ ನಾವು ಏನಾಗುತ್ತೇವೆ ? ಭೂತಕಾಲ ಇಲ್ಲ, ಭವಿಷ್ಯತ್‌ಕಾಲ ಇಲ್ಲ, ಬರೀ ವರ್ತಮಾನ ಕಾಲದ ಒಂದೇ ದಿಕ್ಕು, ಒಂದೇ ದಾರಿ, ರಕ್ಷಣೆ ಇಲ್ಲದ ಅನಾಥ ಶಿಶುಗಳಾಗುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ವಯಂಭುಗಳು.

ಶ್ರೀ ಎಂ. ವೀರಪ್ಪಮೊಯ್ಲಿ.— ಮಾನ್ಯ ಶ್ರೀನಿವಾಸ್ ಅವರ ಭಾಷೆಯಲ್ಲಿ ಸ್ವಯಂಭೂಗಳು. ಅದು ಆಗಲಿಕ್ಕೆ ಮನಸ್ಸಿದೆಯೇ ? We, the legislators who have been elected in 1985 want to call ourselves as ಸ್ವಯಂಭೂಗಳು ?

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಮ್ಮ ಕನ್‌ವೆನ್‌ಷನ್ ನಾವೇ ಹಾಕಿಕೊಳ್ಳುತ್ತೇವೆ, ನಮಗೆ ಹಿಂದೆ ಇಲ್ಲ, ಮುಂದೆ ಇಲ್ಲ ಎಂದು ಲಕ್ಷ್ಮೀಸಾಗರ್ ಅವರು ಹೇಳಿದರಲ್ಲಾ.

SRI M. VEERAPPA MOILY.— Not to be carried by ommissions, or certain practices which are got to be referred to for the sake of conventions, we connot compromise on certain fundamental precepts and practices which are governing us. In page 242 and 243, the chapter 'Complaint against a Member' is there.

> "Further when a Member seeks to raise a question of privilege against another Member, the Speaker as already stated, before giving his consent to the raising of the matter in the House gives an opportunity to the Member complained against to place before the Speaker..."

So, we are at the mode of raising. I have raised a Point of Order at the stage of raising this issue and at this stage if the Member is not present the option left to your good-self is to defer this issue for the next sitting. ಇಲ್ಲಿ ಕೆಲವು ಮಾತು ಬಂತು. ಆಗಲೂ ಬರದಿದ್ದರೆ ಏನು ಮಾಡುತ್ತೀರಿ ಎಂದು. Of course, that is a question which is hypothetical. I am not going to raise that issue for the present. Because,

ಆ ಸಂದರ್ಭ ಬಂದಾಗ ಆ ವಿಚಾರ ಮಾತನಾಡೋಣ. ... ... I do not want to raise a hypothetical issue and say. pass any inference So, it is an essential ingredient of a democr tic practice. ಇದು ನಿರಂಕುಶ ಪ್ರಭುತ್ವ ಅಲ್ಲ. ಪ್ರಜಾಪ್ರಭುತ್ವದ ಪ್ರತಿಯೊಂದು ವಿಚಾರಗಳಿಗೆ ಸ್ಪಂದಿಸತಕ್ಕ ವ್ಯವಸ್ಥೆಯಲ್ಲಿ ನಾವಿರತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ಪ್ರತಿಷ್ಠೆ ಅಥವಾ ತಾಂತ್ರಿಕ ವಿಚಾರಗಳನ್ನು ತಂದು ಇದಕ್ಕೆ ಅಡ್ಡಿ ತರತಕ್ಕ ಕೆಲಸವನ್ನು ಸಭಾನಾಯಕರು ಮಾಡಿದರೆ ಬಹುಶಃ ಅದು ಪಾರ್ಲಿಮೆಂಟರಿ ಪ್ರಾಕ್ಟೀಸ್‌ಗೆ ಡಿಸ್ಟ್ರಕ್ಷನ್ ತರುತ್ತೀರಿ ಎಂಬ ಅಪವಾದಕ್ಕೆ ಗುರಿಯಾಗುತ್ತೀರಿ ಎಂಬುದನ್ನು ಎಂದಿಗೂ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಸನ್ಮಾನ್ಯ ಹಿರಿಯ ಸಚಿವರಾದ ಮಾನ್ಯ ದೇವೇಗೌಡರು ಹೆಗಡೆಯವರು ಮಾತನಾಡುತ್ತಾ ಮೊದಲು ಮುಖ್ಯಮಂತ್ರಿಯಾಗಿದ್ದರು. — — He was holding an of ice. It is a privilege motion against the office. not against Sri Ramakrishna Hegde, as a Member ಎಂದು ಹೇಳಿದರು. He tried to distinguish about it. It is not against the Chief Minister. then, our privilege motion should be directed against Sri Bommai. if it is against the office, because office is continuous. Office is continuous. ಆಫೀಸ್‌ಗೆ ಮರಣ ಇಲ್ಲ. ಒಂದು ಅಧಿಕಾರ ಪೀಠಕ್ಕೆ ಮರಣ ಇಲ್ಲ. ಮಾನ್ಯ ರಾಮಕೃಷ್ಣ ಹೆಗಡೆ ಬರಬಹುದು, ಮಾನ್ಯ ಬೊಮ್ಮಾಯಿಯವರು ಬರಬಹುದು, ತಾವು ಬರಬಹುದು (ಶ್ರೀ ದೇವೇಗೌಡರಿಗೆ). ತಾವು ಬಿಟ್ಟರೆ ಮಾನ್ಯ ರಾಚಯ್ಯನವರು ಬರಬಹುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದು ಇಂಗ್ಲೀಷಿನಲ್ಲಿ Betray, ಆಗಿದೆ. ಆದ್ದರಿಂದ ಕನ್ನಡದ 'ಬಿಟ್ಟರೆ, ಬರುವುದಿಲ್ಲ.

SRI M. VEERAPA MOILY.—So, that means we have to direct our Privilege Motion against the Hon'ble Chief Minister of Karnataka, No, ಅವರು ಈ ಮನೆಯ ಸದಸ್ಯರಿದ್ದಾರೆ for example ಸನ್ಮಾನ್ಯ ದೇವೇಗೌಡರು ಬಹಳ ಅನುಭವ ಇರುವಂತಹವರು he had argued some case today which he was not committed, he was not convinced. After all, it is not the question ಅವರು ಆ ಕಡೆ ಇದ್ದಾರೆ, ನಾವು ಈ ಕಡೆ ಇದ್ದೇವೆ ಎನ್ನುವಂತಹ ಪ್ರಶ್ನೆಯಲ್ಲ. perhaps for the time being we should forget.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹಿಂದೆ ಬಾಟ್ಲಿಂಗ್ ಕಾಂಟ್ರಾಕ್ಟ್ ವಿಚಾರದಲ್ಲೂ ಅವರೇ ಆರ್ಗ್ಯು ಮಾಡಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂತಹ ಕೇಸುಗಳಲ್ಲೇ ಅವರು ಆರ್ಗ್ಯು ಮಾಡುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂತಹ ಕೇಸುಗಳಲ್ಲಿ ಅವರು ಆರ್ಗ್ಯು ಮಾಡುವುದಿಲ್ಲ. ಅದಕ್ಕೆ ನಾನು ಹೇಳಿದ್ದು ನನಗೆ ನೆನಪು ಇಲ್ಲ ಅಂತ.

SRI K.H. SRINIVASA,—Perhaps he is arguing a bad case.

SRI M VEERAPPA MOILY.—He is a person with certain principles and sometimes he succumb to weakness. I don't know why? Like us he is also become victim of certain cirumstances. For example, I am a elected Member. I give a statement against that House as a President of certain Society or a Co-operative Society and I am hauled up here. So when you are a Member I am entitled to give statement in a different capacity. That means everybody can escape by giving statement under different capacity but there is no escape clause. A Member is a Member till he resigns or he cease to be a Member. That entity still remains. ಆದ್ದರಿಂದ ಮೆಂಬರ್

ಬೇರೆ, ಮುಖ್ಯಮಂತ್ರಿಗಳು ಬೇರೆ ಮತ್ತೊಬ್ಬರು ಬೇರೆ. Suppose he was Chief Minister. he has resigned from the Membership, then of course he would have been out side the purvi w of this particular provision which is contained in the Kaul & Shakdher. ಅವರು ಕೌನ್ಸಿಲ್ ಸದಸ್ಯರಾಗಿ ಮುಖ್ಯಮಂತ್ರಿಗಳಾಗಿದ್ದಾರೆ, ತಾವು ಹೇಳತಕ್ಕಂತಹದ್ದು ಸರಿ. ಆದ್ದರಿಂದ ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಅವರು ಈ ಮನೆಯ ಸದಸ್ಯರಿದ್ದಾರೆ. ಈ ಸದನದಲ್ಲಿ ಹಕ್ಕು ಬಾಧ್ಯತೆಯ ಪ್ರಶ್ನೆ ಬಂದಾಗ ಈ ಸಂಸತ್ತಿನ ಒಂದು ಫ್ರೇಮ್‌ನೊಳಗೆ ಅವರನ್ನು ಒಳಗಾಗಿಸಬೇಕು, he has got to submit to this convention, rules and also to the bigger, widerwisdom of the whole House.

ಅಧ್ಯಕ್ಷರು.—ಮುಕ್ತಾಯ ಮಾಡಿ.

ಶ್ರೀ ಎಂ, ವೀರಪ್ಪಮೊಯಿಲಿ.—ಆದ್ದರಿಂದ ನಾನು ಹೇಳುವಂತಹ ವಿಧಿ ಬಿಂಧುವಿನ ಪ್ರಕಾರ ಅವರು ತಪ್ಪು ಮಾಡಿದ್ದಾರೆ. ಐತಿಹಾಸಿಕ ದಾಖಲೆಯೊಳಗೆ ಈ ಸದನದ ಪರಂಪರೆಯೊಳಗೆ ಹೋಗತಕ್ಕ ವಿಚಾರ ಇದರಲ್ಲಿ ಇದೆ.

MR. SPEAKER.—I do agree with you.

ಶ್ರೀ ಎಂ. ವೀರಪ್ಪಮೊಯಿಲಿ.—ಆದ್ದರಿಂದ ಇದರಲ್ಲಿ ಸ್ಪಷ್ಟವಾಗಿದೆ. ಇದನ್ನು ತಾವು ಎತ್ತಿ ಹಿಡಿದು ಸತ್ ಪರಂಪರೆಯನ್ನು ಅತ್ಯಂತ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗ ತಕ್ಕ ಕೀರ್ತಿ ಬೋಧಕರಾಗಬೇಕೆಂದು ತಮ್ಮಲ್ಲಿ ಒತ್ತಾಯಿಸಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

ಶ್ರೀ ಆರ್, ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, plain reading of rule 190 191 and 192, ಅದನ್ನು ನೋಡಿದ ನಂತರ ಸೆಕ್ಷನ್ ೧೯೩ ಅನ್ನು ನೋಡಿದೆ. ಅದರ ಪ್ರಕಾರ ಎಲ್ಲೂ ಯಾವುನೇ ಬ್ರೀಚ್ ಆಫ್ ಪ್ರಿವಿಲೇಜ್ ಮೋಷನ್ ಅನ್ನು ಯಾವ ಒಬ್ಬ ಸದಸ್ಯರು ಮೂವ್ ಮಾಡಿದಾಗ ಅದಕ್ಕೆ ಸಂಬಂಧಪಟ್ಟವರನ್ನು ಈ ಸದನಕ್ಕೆ ಇಲ್ಲಿಗೆ ಕರೆದು, ಅವರಿಗೆ ನೋಟೀಸ್ ಕೊಟ್ಟು, ಅವರಿಗೆ ಎಕ್ಸ್‌ಪ್ಲನೇಷನ್ ತೆಗೆದುಕೊಳ್ಳಬೇಕೆಂದು ಇದರಲ್ಲಿ ಎಲ್ಲೂ ನಮೂದಾಗಿಲ್ಲ. ಕಾಲ್ ಅಂಡ್ ಶಕ್ಧರ್ ಪುಸ್ತಕ ಕಾಮೆಂಟರಿಯೊಳಗೆ ಆ ರೀತಿ ಹೇಳಿರಬಹುದು. ಆದರೆ ಹೌಸ್ ಆಫ್ ಕಾಮನ್, ಪಾರ್ಲಿಮೆಂಟರಿ, ಅಥವಾ ಲೆಜಿಸ್ಲೇಚರ್‌ಗಳಲ್ಲಿ ಇದರ ಹಿಂದೆ ಸಾಕಷ್ಟು ಪ್ರಿವಿಲೇಜ್ ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆ ಕೂಡ ಆಗಿದೆ ಇದರೆ ಸದಸ್ಯನಾದವರು ಆ ಬಗ್ಗೆ ಪ್ರಿಲಿಮಿನರಿ ಹಂತವನ್ನು ಎಸ್ಟಾಬ್ಲಿಷ್ ಮಾಡಿದಾಗ ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟು ಅವರನ್ನು ಹಿಯರ್ ಮಾಡಿದ್ದು ಯಾವುದೇ ಉದಾಹರಣೆ ಇಲ್ಲ.

Our friends on the other side have come to the conclusion that the Hon'ble Sp aker has given them consent. It is not so. We are in preliminary stage. Rule 193 of Rules of Procedure and Conduct of Business in the Assembly says;

> 193 (1) The Speaker if he gives consent under rule 190 and holds that the matter proposed to be discussed is in order, shall after the questions and before the list of business is entered upon, call the member concerned, who shall rise in his plase and while asking for leave to rise the question of p ivilege make a short statement relevant there to.

We have not come to that stage. Then,

> Provided that where the Speaker has refused his consent under rule 190 or is opinion that the matter proposed to

be discussed is not in order, he may, if he thinks it necessary read the notice of question of privilege and State that he refuses consent or holds that the notice of question of privilege is not in order.

Sir, they are saying when the privilege motion is moved, the member concerned may be given an opportunity to read the notice. The question of reading comes only if Speaker gives consent to the notice of privilege. If you think that it is to be rejected before that even notice cannot be read in the House. Therefore, the question of reading the notice given by the Member does not survive in the preliminary stage. It comes only when the Speaker gives consent to the privilege and there should be opportunity to the Member to say whatever he wants to say and then then the Speaker gives ruling. Now, we are in the preliminary stage. There is no scope for even reading the notice as will as submission. There is no question of calling the member and the discussion which is going on may be continued.

ಶ್ರೀ ಎಸ್, ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಹೇಳಿದಂತೆ ಇದು ಒಂದು ಬಹಳ ಮಹತ್ವವಾದ ಮತ್ತು ಗಂಭೀರವಾದ ವಿಚಾರ. ಅಷ್ಟು ಅವಸರವಾಗಿ, ಲಘುವಾಗಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ.

Perhaps for the first time in the history of our Legislature such a situation has arisen where you have to give your ruling which involve very important fundamental parlimentary procedure. I don't deny that. The question is, I don't want to go into the number of references that have been made about Bible, about Bhagvad Geetha, about the author. People who believe in god would accept the Bible or Geetha It has got its own sanctity. People who don't have belief in it they have got right, to express their opinion. Any individual can have the freedom of not believing in God. When he does not have belief in God, why should he quoto Bible analogous won't help. It can only be by persuasion whether it is Bible, whether it is Koran they have got its sanctity. ಭಾರತ ಭಗವದ್ಗೀತೆ ಇವುಗಳನ್ನು ನಂಬಲೇ ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಂಬಿರುವವರಿಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಗೀತೆಯನ್ನು ನಂಬಲೇ ಬೇಕು ಗೀತೆಯ ಬಗೆಗಿನ ಗೌರವದ ಬಗ್ಗೆ ನಾನು ಅಡ್ಡಿ ಬರುವುದಿಲ್ಲ. ಈ ವಾದ ಹೇಳುವಾಗ, ಯಾರಿಗೆ ನಂಬಿಕೆ ಇದೆ ಅವರಿಗೆ ಇದು ಸರಿ. ನಂಬಿಕೆ ಇಲ್ಲದೇ ಇರುವವರಿಗೆ ಸ್ವತಂತ್ರವಾಗಿ ವಿಚಾರ ಮಾಡತಕ್ಕ ಹಕ್ಕು ಇದೆ ಉದಾಹರಣೆಗೆ ಒಂದು ಸಿದ್ಧಾಂತವನ್ನು ನಾವು ಹೇಳುವುದಕ್ಕಾಗುವುದಿಲ್ಲ. ಸಿದ್ಧಾಂತ ಸಿದ್ಧಾಂತವೇ. it should be based on rationalism, reasoning must be accepted. It is not blind faith. It must stand the test of scientific outlock. It should be applied to scientific test, the logical reasoning not blind faith. That is my view. Opinion you may not accept, I have got the freedom, you have got the freedom. The question here is there are rules of

this House and there are precedonts, conventions of number of Legislatures in the world and all over the country and how we have to proceed in such an important question we are facing, Firstly, I would like to clarify the references that have been made both by hon. Member Mr. Moily and others, I quote from Practice and Procedure of Parliment by Kaul and Shakdar, page 242. It says.

> "Further, when a member seeks to raise question of privilege against another member, the Speaker, as already stated, before giving his consent to the raising of the matter in the House, gives an opportunity to the member complained against, to place before the Speaker or the House such facts as he may have on the question. Where a complaint of an alleged breach of privilege or contempt of the House was based on a newspaper report of an alleged statement made by a member outside the House, which the member concerned denied having made, the Speaker accepted the statement of that member in preference to what had appeared in the newspaer, and with help his consent to the raising of the question of privilege".

This is ruling. Hon. Member Sri M. S. Krishnan, based on part of the ruling. The next part refers to.

> "When a complaint against a member is brought before the House, it is essential that the member concerned should be present in the House; in case, he is not present, the making of the complaint is deferred until the following sitting. Where the member complained against is present in the House when the complaint is made, he is heard in explanation and then directed to withdraw from the House by the Speaker."

This is the opinicn of the author. Let us have ruling of the Heuse and the opinion of the author is only an authority. Which we all respect for which I would only submit that this is not final. Taking into consideration number of conventions and our rules, the Hon'ble Speaker may com to any conclusion. Hon'ble Speaker may say the presence of person is essential and he can order for it. The Hon'ble Speaker may come to conclusion at this stage the presence is not necessary, That also you can say. Here our rule is very clear and that has been referred already by the Hon'ble Minister Sri Deshpande. I would only like to read relevant portion.

> "A member may, with the consent of the Speaker, raise a question involving a breach of privilege either of a member, or the House or of a Committee there of."

Now, attempt is made to get the consent of the Hon'ble Speaker Preliminary submissions are made to get the consent of the Hon'ble Speaker. That is the practice. Whether to give consent or not, it is left to the discretion of the Hon'ble Speaker. Then, I will come to rule 193 It reads.

> 'Provided that where the Speaker has refused his consent under rule 190 or is opinion.

The Speaker has got powers to refuse the consent under rule 190 If he refuses there is no question of calling the Member or asking him to be present. It is only a preliminsary submission. Once the consent is given, if there is any objection you have to ask the opinion and if 12 members stand you are bound to give consent. That is the procedure, Before that there is no question of anybody beging present. This is my humble submission.

Accepting Kaul's observation which has been said :

> "Further, when a member seeks to raise question of privilege against another member, the Speaker, as already stated, before giving consent to the raising of the matter in the House, gives an opportunity to the member complained against, to place before the Speaker or the House such facts as he may have on the question. Where a complaint of an alleged breach of privilege or contempt of the House was based on a newspaper report of an alleged statement made by a member outside the House......"

Here the Hon'ble Speaker has to give consent under rule 193, Sir, before giving your consent if we are going to take adverse decision against hon'ble Member of the House under this rule you can give opportunity and further if the matter is raised on the basis of newspaper report and if the Member gives explanation you can reject it accepting the statement of the Member. The procedure is, if it is based on newspaper report you can ask for explanation then if the Member explains supposing he says he has not made such a statement or he says newspaper has wrongly quoted or out of context, then you may reject the entire motion. Therefore, there are two stages : Firstly, syreking your consent... that is one stage and after your consent another stage. These are two stages where we have to discuss this matter and another stage is what the Hon'ble Minister Mr. Deve Gowda has quoted. Mr. Devegowda quoted rule 195, Under this rule, the Speaker may give consent suo moto on seeing the privilege motion, he can give it, then where is the question the hon'ble Member being present. If you read the entire gamut of privilege motion and the rules that have been provided in the ru

it would be very clear whether the presence of a Member may be necessary or may not be necessary. But still I do respect the views of hon. Member. You have got discretion and this being a technical issue, legal issue and this is going to be a precedent in this House. I would like the Hon'ble Speaker to give serious thought on this point and also the views of the Hon.ble Members and give a considered ruling. Then, other things which is part of the topic. ಕೆಲವರು ಗೆಳೆಯರು ಹೇಳಿದರು ಶ್ರೀಮಾನ್ ಹೆಗಡೆಯವರು ಪತ್ರಿಕೆಯಲ್ಲಿ ಹೇಳಿದ್ದಾರೆ ಎಂದು. ನಾನು ಹಾಜರಿದ್ದರೆ ಮುಕ್ತವಾದ ಚರ್ಚೆಗೆ ಅವಕಾಶ ಆಗದಿರಬಹುದು ಎಂಬುದು ಅವರ ಅಭಿಪ್ರಾಯ. ಅವರು ಹೇಳಿದರು ಏನೆಂದರೆ ಹೆಗಡೆಯವರು ಏನು ಹುಲಿಯೇ, ಸಿಂಹವೇ ? ಇಲ್ಲಿ ಅವರು ಬಂದು ಕುಳಿತರೆ ನಾವೇನು ಅಂಜಿಕೊಳ್ಳುತ್ತೇವೆಯೇ ಎಂದು. ಇದು ಒಂದು ಅಭಿಪ್ರಾಯ. ನನ್ನ ಅಭಿಪ್ರಾಯದಲ್ಲಿ ನಾನು ಮೊದಲನೇ ದಿವಸವೇ ಹೇಳಿದ್ದೇನೆ. ಶ್ರೀ ಹೆಗಡೆಯವರು ಇಲ್ಲಿದ್ದರೆ ಒಳ್ಳೆಯದೆಂದು ನನ್ನದು ವೈಯಕ್ತಿಕವಾದ ಅಭಿಪ್ರಾಯ. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಇವತ್ತಿಗೂ ಅದು ನನ್ನ ಅಭಿಪ್ರಾಯ ಇದೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಶ್ರೀ ಹೆಗಡೆಯವರು ಇರುವುದು ಒಳ್ಳೆಯದು. ಆದರಿಂದ ಚರ್ಚೆಗೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಅವರ ಅಭಿಪ್ರಾಯ ಅವರಿಗೆ. ಆದರೆ ಅವರು ಹಾಜರಿ ಇರಲೇಬೇಕೆಂಬ ವಾದ ಏನಿದೆ, ಅದರ ಬಗ್ಗೆ ಗಂಭೀರವಾಗಿ ತಾವು ಆಲೋಚನೆ ಮಾಡಬೇಕು.

೩-೦೦ ಪಿ. ಎಂ.

ತಾವು ಆಲೋಚನೆ ಮಾಡಿ ನಿರ್ಣಯ ಕೊಡಬೇಕೆಂದು ಹೇಳುತ್ತೇನೆ. ವೈಶಂಪಾಯನ ಸರೋವರದಲ್ಲಿ ಅಡಗಿದಂತೆ ಎಂಬ ಮಾನ್ಯ ಸದಸ್ಯರ ವಾದಕ್ಕೆ ಅರ್ಥವಿಲ್ಲ. ಮಾನ್ಯ ಹೆಗಡೆಯವರು ಇಲ್ಲಿ ಇರದೇ ಇರುವುದಕ್ಕೆ ನೀವೇನು ಹುಲಿಗಳೇ, ಸಿಂಹಗಳೇ ಅಥವಾ ನೀವೇನು ರಾಕ್ಷಸಿಗಳೇ ? ನಿಮ್ಮ ಬಗ್ಗೆ ನಮ್ಮ ಬಗ್ಗೆ ಇಲ್ಲಿ ಹೇಳಬಹುದು. ಮಾನ್ಯ ಹೆಗಡೆಯವರು ಏನು, ಅವರ ಚರಿತ್ರೆ ಏನು, ಈ ರಾಷ್ಟ್ರದಲ್ಲಿ ಅವರ ಬಗ್ಗೆ ಜನಾಭಿಪ್ರಾಯ ಏನಿದೆ; ಎಂಬುದನ್ನು ನಿಮ್ಮ ಮಾತಿನ ಜಾಲದಿಂದ ಅಳಿಸಲು ಸಾಧ್ಯವಿಲ್ಲ. He has got his own place in the history of this country. You cannot deny; you cannot wipe it out by your tactics. ಮಾನ್ಯ ಹೆಗಡೆಯವರ ಸ್ಥಾನ ಏನಿದೆ, ಅದನ್ನು ಅಲುಗಿಸುವುದಕ್ಕಾಗುವುದಿಲ್ಲ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ನಿಮಗೆ ಮಾರ್ಗದರ್ಶಕರು ಇಟ್ಟುಕೊಳ್ಳಿ, ನಾವು ಬೇಡ ಎನ್ನುವುದಿಲ್ಲ......You follow him.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಒಂದು ವಿಚಾರ ಹೇಳಿಬಿಡುತ್ತೇನೆ. I am never a hero worshiper. Hegde is not my hero. I have no belief in personality cult, ನಾನು ನಿಮ್ಮ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಪಕ್ಷ, ಜನತಂತ್ರ, ಮೌಲ್ಯಗಳು ಇಡೀ ದೇಶಕ್ಕೇ ಗೊತ್ತಿದೆ .....

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಮೌಲ್ಯಗಳನ್ನು ಹೇಳುವುದಕ್ಕೇ ಬಂದಿರುವುದು...

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಬಗ್ಗೆ ಹೇಳುತ್ತಾ ಹೋದರೆ, ಇದು ಬೆಳೆಯುತ್ತದೆ......

ಶ್ರೀ ವೇದಾಂತ ಹೆಮ್ಮಿಗೆ.—ಕೇಂದ್ರದಲ್ಲಿ ನಿಮ್ಮನ್ನು ಅಧಿಕಾರದಿಂದ ಓಡಿಸುವವರೂ ಮಾನ್ಯ ಹೆಗಡೆಯವರೇ......

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ಪಕ್ಷದಲ್ಲಿ ವಿರೋಧ ಪಕ್ಷದ ನಾಯಕರನ್ನು ಯಾರು ನೇಮಕ ಮಾಡುತ್ತಾರೆ. ಪಕ್ಷದ ಅಧ್ಯಕ್ಷರನ್ನು ಯಾರು ನೇಮಕ ಮಾಡುತ್ತಾರೆ ಎಂಬುದು ಗೊತ್ತಿದೆ. ನಿಮಗೆ ಚುನಾವಣೆ ಎಂಬುದೇ ಗೊತ್ತಿಲ್ಲ, ಆಂತರಿಕ ಶಕ್ತಿ ಎಲ್ಲಿದೆ ಎಂಬುದು ಇಡೀ ದೇಶಕ್ಕೆ ಗೊತ್ತಿದೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ವಿಚಾರವನ್ನು ಸನ್ಮಾನ್ಯ ರಾಚಯ್ಯನವರ ಹತ್ತಿರ ಕೇಳಬೇಕು......

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಹೆಗಡೆಯವರು ಯಾರಿಗೋ ಅಂಜಿಕೊಂಡು ಹೋಗಿದ್ದಾರೆಂದು ಅಲ್ಲ ಮಾನ್ಯ ಹೆಗಡೆಯವರು ಇದ್ದರೆ ಮಾತನಾಡತಕ್ಕ ನೈತಿಕ ಬಲ ಇಲ್ಲ ಎಂದೂ ಹೇಳುತ್ತಿಲ್ಲ.

SRI K.H. SRINIVAS.—Sir,

(INTERRUPTION)

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಸ್ಪಷ್ಟವಾದ ಅಭಿಪ್ರಾಯ, ನಮ್ಮ ರೂಲ್ಸ್ ಕ್ಲಿಯರ್ ಆಗಿದೆ. I agree with his view. ಕೌಲ್ ಅವರ ಅಭಿಪ್ರಾಯದಲ್ಲಿ ಇರಲೇಬೇಕು ಎಂದೂ ಹೇಳಿದ್ದಾರೆ, ಕರೆಸಲೇಬೇಕು ಎಂದೂ ಇದೆ. ಆದರೆ ಬರದೇ ಹೋದರೆ. this House has got powers to expel even Mr. Hegde, if the House decides. If Hon'ble Speaker decides that the Member shall attend, then he shall have to attend the House If he does not attend.then thehousecan take a decisi onto expel him.Whether to summon him to the House is left to the Hon'ble Speaker. It is left to the decision of the Hon'ble Speaker. We are awaiting your pronouncement Sir. One more thing Sir it is not the question of Mr. Hegde or Bommai It is the honour and privilege of this House which is involved. It is not the question of an individcual, but it is the privilege of the entire House which is involved. Therefore, I request the Hon'ble Speaker to give a considered ruling taking into consideration all the factors and if necessary, he may take some more time to give a decision. He may even go through the rulings of other State Legislatures or even Parliament and give a considered ruling.

ಅಧ್ಯಕ್ಷರು.—ಈಗ ಸನ್ಮಾನ್ಯ ಸದಸ್ಯರಾದ ವೀರಪ್ಪಮೊಯಿಲಿಯವರು ಎತ್ತಿದಂಥ ಕ್ರಿಯಾ ಲೋಪ ಏನಿದೆ ಅದು ಬಹಳ ಮಹತ್ವವಾದುದು. ಅವರು ಯಾವ ಸ್ಟೇಜ್‌ನಲ್ಲಿ ಇದನ್ನು ಎತ್ತಿದ್ದಾರೆ ಅದು ಬಹಳ ಮುಖ್ಯ. ಈ ದಿವಸ ಅವಕಾಶ ಕೊಟ್ಟಿರುವುದು ಪ್ರಿಲಿಮಿನರಿ ಹಿಯರಿಂಗ್‌ಗೆ ಮಾತ್ರ. ನಾನು ಮೊದಲೇ ಹೇಳಿದೆ, ಮೂರು ಅಡ್ಜರ್ನ್‌ಮೆಂಟ್ ಮೋಷನ್‌ಗಳು ಬಂದಿವೆ, ಒಂದು ಕಾಂಗ್ರೆಸ್‌ನವರು ಕೊಟ್ಟಿದ್ದಾರೆ, ಒಂದು ಸಿ.ಪಿ.ಐ.ನವರು ಕೊಟ್ಟಿದ್ದಾರೆ, ಮತ್ತೊಂದು ಸಿ.ಪಿ.ಐ. ಎಮ್‌ನವರು ಕೊಟ್ಟಿದ್ದಾರೆ ಎಲ್ಲರಿಗೂ ಅವಕಾಶ ಕೊಡಬೇಕು. ಮೂರು ಜನರಿಗೆ ಕೊಡಬೇಕು ಮತ್ತು ೧೫ ಮಿನಿಟ್ ಕೊಡಬೇಕೆನ್ನತಕ್ಕಂಥಾದ್ದು ನನ್ನ ಉದ್ದೇಶ. ಎಂ.ಎಸ್. ಕೃಷ್ಣನ್‌ರವರು, ವೆಂಕಟರಾಮಯ್ಯನವರು ಮಾತನಾಡಿದ್ದಾರೆ. ಭೂಪತಿಯವರು ಪ್ರಾರಂಭ ಮಾಡಿದ್ದಾರೆ. ಇನ್ನು ಮೇಜರ್ ಪಾರ್ಟಿಯವರಾದ ಶ್ರೀಮತಿ ನಾಗರತ್ನಮ್ಮನವರು, ಮಾತನಾಡಿಲ್ಲ, ಖರ್ಗೆಯವರು ಮಾತನಾಡಿಲ್ಲ, ವೀರಪ್ಪ ಮೊಯಿಲಿಯವರು ಮಾತನಾಡಿಲ್ಲ. ಭೂಪತಿಯವರು ಇನ್ನೂ ಮುಗಿಸಿಲ್ಲ. ಇವರೆಲ್ಲರೂ ಮುಗಿಸಿದ ಮೇಲೆ ನಾನು ಒಂದು ತೀರ್ಮಾನಕ್ಕೆ ಬರಬಹುದು. ಕನ್‌ಸೆಂಟ್ ಆದರೂ ಕೊಡಬಹುದು, ಕನ್‌ಸೆಂಟ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ರಿಜೆಕ್ಟ್ ಮಾಡಬಹುದು, ಸ್ಟ್ರೈಟ್ ಅವೇ ಪ್ರಿವಿಲೇಜ್ ಕಮಿಟಿಗಾದರೂ ಹಾಕಬಹುದು. ಮೂರು ತರಹ ಇದೆ. ಈ ಮೂರರಲ್ಲಿ ಯಾವುದೇ ಒಂದು ತೀರ್ಮಾನ ಕೊಡಬೇಕಾದರೂ ಉಳಿದವರೆಲ್ಲರದ್ದೂ ಹಿಯರಿಂಗ್ ಮಾಡ ಬೇಕಾಗುತ್ತದೆ. ಪ್ರಿಲಿಮಿನರಿ ಸ್ಟೇಜ್‌ನಲ್ಲಾಗಲೀ ಫೈನಲ್ ಹಿಯರಿಂಗ್ ಸ್ಟೇಜ್‌ನಲ್ಲಾಗಲೀ ಸಂಬಂಧ ಪಟ್ಟ ಸದಸ್ಯರು ಯಾರ ಮೇಲೆ ಆರೋಪ ಇರುತ್ತದೆ ಅವರು ಸದನದಲ್ಲಿ ಹಾಜರು ಇರಲೇಬೇಕು ಎಂದು ಅಥವಾ ಇರಬಾರದು ಎಂದು ಎಲ್ಲೂ ನಮ್ಮ ರೂಲ್ಸ್‌ನಲ್ಲಿ ಇಲ್ಲ. ಪಾರ್ಲಿಮೆಂಟ್ ರೂಲಿಂಗ್ ಇಲ್ಲ. ಇರಲೇ ಬೇಕೆಂದೂ ಇಲ್ಲ, ಇರಲೇಬಾರದು ಎಂದೂ ಇಲ್ಲ. ನಮ್ಮ ಇದರ ಪ್ರಕಾರ ಏನಿದೆ ಎಂದರೆ,